ಮೋಕ್ಷ ಅಧಿಕಾರ

ಅಥ ಪ್ರವಿಶತಿ ಮೋಕ್ಷಃ ।

(ಶಿಖರಿಣಿ)

ದ್ವಿಧಾಕೃತ್ಯ ಪ್ರಜ್ಞಾಕ್ರಕಚದಲನಾದ್ಬಂಧಪುರುಷೌ
ನಯನ್ಮೋಕ್ಷಂ ಸಾಕ್ಷಾತ್ಪುರುಷಮುಪಲಂಭೈಕನಿಯತಮ್ ।
ಇದಾನೀಮುನ್ಮಜ್ಜತ್ಸಹಜಪರಮಾನಂದಸರಸಂ
ಪರಂ ಪೂರ್ಣಂ ಜ್ಞಾನಂ ಕೃತಸಕಲಕೃತ್ಯಂ ವಿಜಯತೇ ॥೧೮೦॥

ಕರ್ಮಬಂಧವನ್ನೆಲ್ಲ ಕತ್ತರಿಸಿ ಮುಕ್ತಿನೆಲೆಗೇರಿದ
ಸಿದ್ಧಪರಮಾತ್ಮರಿಗೆ ವಂದಿಸುವೆ ನಿರ್ಮಲಮನದಿ ॥

ಪ್ರಾರಂಭದಲ್ಲಿ ಟೀಕಾಕಾರರಾದ ಆಚಾರ್ಯದೇವರು "ಈಗ ಮೋಕ್ಷವು ಪ್ರವೇಶಮಾಡುತ್ತದೆ"ಂದು ಹೇಳುತ್ತಾರೆ.

ಯಾವ ಪ್ರಕಾರ ನೃತ್ಯರಂಗದಲ್ಲಿ ವೇಷಧಾರಿಯು ಪ್ರವೇಶವಾಗುತ್ತದೆ ಅದೇ ಪ್ರಕಾರ ಇಲ್ಲಿ ಮೋಕ್ಷತತ್ತ್ವದ ಸೋಗು ಪ್ರವೇಶಮಾಡುತ್ತದೆ. ಅಲ್ಲಿ ಜ್ಞಾನವು ಎಲ್ಲ ಸೋಗುಗಳನ್ನು ತಿಳಿಯುತ್ತಿರುವುದರಿಂದ ಅಧಿಕಾರದ ಪ್ರಾರಂಭದಲ್ಲಿ ಆಚಾರ್ಯದೇವರು ಸಮ್ಯಕ್‌ಜ್ಞಾನದ ಮಹಿಮೆಯರೂಪದಲ್ಲಿ ಮಂಗಲಾಚರಣೆಯನ್ನು ಹೇಳುತ್ತಾರೆ,—

ಶ್ಲೋಕಾರ್ಥ :- [ಇದಾನೀಂ] ಈಗ (ಬಂಧಪದಾರ್ಥದನಂತರ), [ಪ್ರಜ್ಞಾ-ಕ್ರಕಚ-ದಲನಾತ್ ಬಂಧ-ಪುರುಷೌ ದ್ವಿಧಾಕೃತ್ಯ] ಪ್ರಜ್ಞೆಯೆಂಬ ಕರಗಸದಿಂದ ಸೀಳುವಿಕೆಯ ಮುಖಾಂತರ ಬಂಧ ಮತ್ತು ಆತ್ಮನನ್ನು ದ್ವಿಧಾ (ಬೇರೆ-ಬೇರೆ ಎರಡು) ಮಾಡಿ, [ಪುರುಷಂ ಉಪಲಂಭ-ಏಕ-ನಿಯತಂ] ಪುರುಷನಿಗೆ-ಯಾವ ಆತ್ಮನು ಕೇವಲ ಅನುಭೂತಿಯಿಂದಲೇ* ನಿಶ್ಚಿತನಿದ್ದಾನೆ ಅವನಿಗೆ-[ಸಾಕ್ಷಾತ್ ಮೋಕ್ಷಂ ನಯತ್] ಪ್ರತ್ಯಕ್ಷವಾಗಿ ಮೋಕ್ಷವನ್ನುಂಟುಮಾಡುತ್ತಿರುವ [ಪೂರ್ಣಂ ಜ್ಞಾನಂ ವಿಜಯತೇ] ಪೂರ್ಣಜ್ಞಾನವು ವಿಜಯಿಯಾಗಿ ವರ್ತಿಸುತ್ತಿದೆ.

* ಸ್ವರೂಪಾನುಭವವು ಎಷ್ಟಿದೆ ಅಷ್ಟೇ ಆತ್ಮನಿದ್ದಾನೆ.

ಜಹ ಣಾಮ ಕೋ ವಿ ಪುರಿಸೋ ಬಂಧಣಯಮ್ಹಿ ಚಿರಕಾಲಪಡಿಬದ್ಧೋ ।
ತಿವ್ವಂ ಮಂದಸಹಾವಂ ಕಾಲಂ ಚ ವಿಯಾಣದೇ ತಸ್ಸ ।।೨೮೮।।

ಜಇ ಣ ವಿ ಕುಣದಿ ಚ್ಛೇದಂ ಣ ಮುಚ್ಚದೇ ತೇಣ ಬಂಧಣವಸೋ ಸಂ ।
ಕಾಲೇಣ ಉ ಬಹುಗೇಣ ವಿ ಣ ಸೋ ಣರೋ ಪಾವದಿ ವಿಮೋಕ್ಖಂ ।।೨೮೯।।

ಆ ಜ್ಞಾನವು [ಉನ್ಮಜ್ಜತ್-ಸಹಜ-ಪರಮ-ಆನಂದ-ಸರಸಂ] ಸ್ವಾಭಾವಿಕವಾಗಿ ಪ್ರಕಟವಾಗುವಂಥ ಪರಮಾನಂದದಿಂದ ಸರಸ ಎಂದರೆ ರಸಪೂರ್ಣವಾಗಿದ, [ಪರಂ] ಉತ್ಕೃಷ್ಟವಾಗಿದೆ, ಮತ್ತು [ಕೃತ-ಸಕಲ-ಕೃತ್ಯಂ] ಯಾವನು ಮಾಡಬೇಕಾದ ಎಲ್ಲ ಕಾರ್ಯಗಳನ್ನು ಮಾಡಿಬಿಟ್ಟಿದ್ದಾನೆ (—ಯಾವನಿಗೆ ಮಾಡಬೇಕಾದುದೇನೂ ಬಾಕಿ ಉಳಿದಿಲ್ಲ) ಈ ಪ್ರಕಾರವಾಗಿದ್ದಾನೆ.

ಭಾವಾರ್ಥ :- ಜ್ಞಾನವು ಬಂಧ ಮತ್ತು ಆತ್ಮನನ್ನು ಬೇರೆಮಾಡಿ, ಆತ್ಮನನ್ನು ಮೋಕ್ಷಕ್ಕೆ ತಲುಪಿಸುತ್ತ, ತನ್ನ ಸಂಪೂರ್ಣ ಸ್ವರೂಪವನ್ನು ಪ್ರಕಟಪಡಿಸಿ ವಿಜಯಿಯಾಗಿ ಪ್ರವರ್ತಿಸುತ್ತಿದೆ, ಹೀಗೆ ಜ್ಞಾನದ ಸರ್ವೋತ್ಕೃಷ್ಟವಾದ ಕಥನವೇ ಮಂಗಲಾಚರಣೆಯಿದೆ. ।।೧೮೦।।

ಈಗ ಮೋಕ್ಷದ ಪ್ರಾಪ್ತಿಯು ಹೇಗಾಗುತ್ತದೆಂಬುದನ್ನು ಹೇಳುತ್ತಾರೆ. ಅದರಲ್ಲಿ ಮೊದಲಂತೂ ಯಾವ ಜೀವನು ಬಂಧದ ಛೇದ ಮಾಡದೆ ಕೇವಲ ಬಂಧದ ಸ್ವರೂಪವನ್ನು ತಿಳಿದುಕೊಳ್ಳುವುದರಿಂದಲೇ ಸಂತುಷ್ಟನಾಗುತ್ತಾನೆ ಅವನು ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳಲಾರನೆಂಬುದನ್ನು ಹೇಳುತ್ತಾರೆ,—

ಗಾಥೆ - ೨೮೮-೨೯೦

ಗಾಥಾರ್ಥ :- [ಜಹ ಣಾಮ] ಯಾವ ಪ್ರಕಾರ [ಬಂಧಣಯಮ್ಹಿ] ಬಂಧನದಲ್ಲಿ [ಚಿರಕಾಲ ಪಡಿಬದ್ಧೋ] ಚಿರಕಾಲದಿಂದ ಬಂಧಿಸಲ್ಪಟ್ಟ [ಕೋ ವಿ ಪುರಿಸೋ] ಯಾವನೋ ಪುರುಷನು [ತಸ್ಸ] ಆ ಬಂಧನದ [ತಿವ್ವಂ ಮಂದಸಹಾವಂ] ತೀವ್ರ-ಮಂದಸ್ವಭಾವವನ್ನು [ಕಾಲಂ ಚ] ಮತ್ತು ಕಾಲವನ್ನು (ಎಂದರೆ ಬಂಧನವು ಎಷ್ಟು ಕಾಲದಿಂದಿದೆ ಎಂಬುದನ್ನು) [ವಿಯಾಣದೇ] ತಿಳಿದುಕೊಳ್ಳುತ್ತಾನೆ, [ಜಇ] ಆದರೆ ಒಂದುವೇಳೆ [ಣ ವಿ ಚ್ಛೇದಂ ಕುಣದಿ] ಆ ಬಂಧನವನ್ನು ತಾನು ಕತ್ತರಿಸದಿದ್ದರೆ [ತೇಣ ಣ ಮುಚ್ಚದೇ] ಅವನು ಅದರಿಂದ ಮುಕ್ತನಾಗುವುದಿಲ್ಲ. [ಉ] ಮತ್ತು (ಬಂಧಣವಸೋ ಸಂ) ಬಂಧನಕ್ಕೆ ಒಳಗಾಗಿರುತ್ತ [ಬಹುಗೇಣ ವಿ ಕಾಲೇಣ] ಅದೆಷ್ಟೋ ಕಾಲದಲ್ಲೂ [ಸೋ ಣರೋ] ಆ ಪುರುಷನು [ವಿಮೋಕ್ಖಂ ಣ ಪಾವದಿ] ಬಂಧನದಿಂದ ಬಿಡುಗಡೆಯರೂಪವಾದ ಮುಕ್ತಿಯನ್ನು ಪ್ರಾಪ್ತಮಾಡಿಕೊಳ್ಳಲಾರನು; [ಇಯ] ಹೀಗೆ ಜೀವನು [ಕಮ್ಮಬಂಧ-

ಏ ತೆರ ಪುರುಷನೋರ್ವ ಬಂಧನದಿ ಚಿರಕಾಲ ಪ್ರತಿಬದ್ಧನಾಗಿಹನು ।
ಆ ತೀವ್ರ-ಮಂದಸ್ವಭಾವಗಳ ಮತ್ತದರಂತೆ ಬಂಧದಕಾಲ ತಿಳಿಯುವನು ।।೨೮೮।।

ಆದರದಭೇದಿಸದೆ ಬಿಡುಗಡೆಯಾಗದೆ ಬಂಧವಶನಾಗಿಹನು ।
ಅದೆಷ್ಟೋಕಾಲಕಳೆದರಾಪುರುಷ ಬಂಧನದಿ ಮುಕ್ತಿಯನು ಪಡೆಯನು ।।೨೮೯।।

ಇಯ ಕಮ್ಮಬಂಧಣಾಣಂ ಪದೇಸಠಿಇಪಯಡಿಮೇವಮಣುಭಾಗಂ ।
ಜಾಣಂತೋ ವಿ ಣ ಮುಚ್ಚದಿ ಮುಚ್ಚದಿ ಸೋ ಚೇವ ಜದಿ ಸುದ್ಧೋ ॥೨೯೦॥

ಯಥಾ ನಾಮ ಕಶ್ಚಿತ್ಪುರುಷೋ ಬಂಧನಕೇ ಚಿರಕಾಲಪ್ರತಿಬದ್ಧಃ ।
ತೀವ್ರಮಂದಸ್ವಭಾವಂ ಕಾಲಂ ಚ ವಿಜಾನಾತಿ ತಸ್ಯ ॥೨೮೮॥

ಯದಿ ನಾಪಿ ಕರೋತಿ ಛೇದಂ ನ ಮುಚ್ಯತೇ ತೇನ ಬಂಧನವಶಃ ಸನ್ ।
ಕಾಲೇನ ತು ಬಹುಕೇನಾಪಿ ನ ಸ ನರಃ ಪ್ರಾಪ್ನೋತಿ ವಿಮೋಕ್ಷಮ್ ॥೨೮೯॥

ಇತಿ ಕರ್ಮಬಂಧನಾನಾಂ ಪ್ರದೇಶಸ್ಥಿತಿಪ್ರಕೃತಿಮೇವಮನುಭಾಗಮ್ ।
ಜಾನನ್ನಪಿ ನ ಮುಚ್ಯತೇ ಮುಚ್ಯತೇ ಸ ಚೈವ ಯದಿ ಶುದ್ಧಃ ॥೨೯೦॥

ಆತ್ಮಬಂಧಯೋರ್ದ್ವಿಧಾಕರಣಂ ಮೋಕ್ಷಃ । ಬಂಧಸ್ವರೂಪಜ್ಞಾನಮಾತ್ರಂ ತದ್ಧೇತುರಿತ್ಯೇಕೇ, ತದಸತ್; ನ ಕರ್ಮಬದ್ಧಸ್ಯ ಬಂಧಸ್ವರೂಪಜ್ಞಾನಮಾತ್ರಂ ಮೋಕ್ಷಹೇತುಃ, ಅಹೇತುತ್ವಾತ್, ನಿಗಡಾದಿಬದ್ಧಸ್ಯ ಬಂಧಸ್ವರೂಪಜ್ಞಾನಮಾತ್ರವತ್ । ಏತೇನ ಕರ್ಮಬಂಧಪ್ರಪಂಚರಚನಾಪರಿಜ್ಞಾನಮಾತ್ರಸಂತುಷ್ಟಾ ಉತ್ಥಾಪ್ಯಂತೇ ।

ಣಾಣಂ] ಕರ್ಮಬಂಧನಗಳ [ಪದೇಸಠಿಇಪಯಡಿಮೇವಮಣುಭಾಗಂ] ಪ್ರದೇಶ, ಸ್ಥಿತಿ, ಪ್ರಕೃತಿ ಮತ್ತು ಅನುಭಾಗಗಳನ್ನು [ಜಾಣಂತೋ ವಿ] ತಿಳಿದುಕೊಳ್ಳುತ್ತಿದ್ದರೂ [ಣ ಮುಚ್ಚದಿ] (ಕರ್ಮಬಂಧನದಿಂದ) ಬಿಡುಗಡೆ ಹೊಂದುವುದಿಲ್ಲ. [ಚೇವ ಜದಿ ಸೋ ಸುದ್ಧೋ] ಆದರೆ ಒಂದುವೇಳೆ ಅವನು ಸ್ವತಃ (ರಾಗಾದಿಗಳನ್ನು ದೂರಮಾಡಿ) ಶುದ್ಧನಾಗುತ್ತಾನೆ [ಮುಚ್ಚದಿ] ಆಗಲೇ ಬಿಡುಗಡೆ ಹೊಂದುತ್ತಾನೆ-ಮುಕ್ತನಾಗುತ್ತಾನೆ.

ಟೀಕೆ :- ಆತ್ಮ ಮತ್ತು ಬಂಧ ಇವೆರಡರ ದ್ವಿಧಾಕರಣವು (ಎಂದರೆ ಆತ್ಮ ಮತ್ತು ಬಂಧವನ್ನು ಬೇರೆ ಬೇರೆ ಮಾಡಿಬಿಡುವುದು) ಅದು ಮೋಕ್ಷವಾಗಿದೆ. 'ಬಂಧಸ್ವರೂಪದ ಜ್ಞಾನಮಾತ್ರವೇ ಮೋಕ್ಷದ ಕಾರಣವಾಗಿದೆ (ಎಂದರೆ ಬಂಧದ ಸ್ವರೂಪವನ್ನು ಕೇವಲ ತಿಳಿದುಕೊಳ್ಳುವುದರಿಂದಲೇ ಮೋಕ್ಷವಾಗುತ್ತದೆ')—ಎಂದು ಅದೆಷ್ಟೋ ಜನರು ಹೇಳುತ್ತಾರೆ, ಆದರೆ ಇದು ಅಸತ್ಯವಾಗಿದೆ; ಕರ್ಮದಿಂದ ಕಟ್ಟಲ್ಪಟ್ಟ ಜೀವನಿಗೆ ಬಂಧಸ್ವರೂಪದ ಜ್ಞಾನ ಮಾತ್ರವೇ ಮೋಕ್ಷದ ಕಾರಣವಾಗಿಲ್ಲ, ಏಕೆಂದರೆ ಯಾವ ಪ್ರಕಾರ ಸಂಕಲೆ ಮೊದಲಾದವುಗಳಿಂದ ಕಟ್ಟಲ್ಪಟ್ಟ ಜೀವನಿಗೆ ಬಂಧಸ್ವರೂಪದ ಜ್ಞಾನಮಾತ್ರವು ಬಂಧನದಿಂದ ಮುಕ್ತವಾಗುವ ಕಾರಣವಾಗಿಲ್ಲ, ಅದೇ ಪ್ರಕಾರ ಕರ್ಮದಿಂದ ಕಟ್ಟಲ್ಪಟ್ಟ ಜೀವನಿಗೆ ಕರ್ಮಬಂಧದ ಸ್ವರೂಪದ ಜ್ಞಾನಮಾತ್ರವು ಕರ್ಮಬಂಧನದಿಂದ ಮುಕ್ತವಾಗುವ ಕಾರಣವಾಗಿಲ್ಲ, ಯಾರು ಕರ್ಮಬಂಧದ ಪ್ರಪಂಚದ (ವಿಸ್ತಾರದ) ರಚನೆಯ ಜ್ಞಾನಮಾತ್ರದಿಂದ ಸಂತುಷ್ಟರಾಗುತ್ತಲಿದ್ದಾರೆ ಅವರ ಉತ್ಥಾಪನೆಯನ್ನು (ಖಂಡನೆಯನ್ನು) ಈ ಕಥನದಿಂದ ಮಾಡಲಾಗಿದೆ.

ಹೀಗೆ ಕರ್ಮಬಂಧದ ಪ್ರಕೃತಿ, ಪ್ರದೇಶ, ಸ್ಥಿತಿ ಮೇಣನುಭಾಗ ತಿಳಿದರು ।
ಆಗ ಜೀವನಿಗೆ ಬಿಡುಗಡೆಯಿಲ್ಲಾತ ಶುದ್ಧನಾದಾಗ ಮುಕ್ತನಾಗುವನು ॥೨೯೦॥

ಜಹ ಬಂಧೇ ಚಿಂತಂತೋ ಬಂಧಣಬದ್ಧೋ ಣ ಪಾವದಿ ವಿಮೋಕ್ಖಂ ।
ತಹ ಬಂಧೇ ಚಿಂತಂತೋ ಜೀವೋ ವಿ ಣ ಪಾವದಿ ವಿಮೋಕ್ಖಂ ॥೨೯೧॥

ಯಥಾ ಬಂಧಾಂಶ್ಚಿಂತಯನ್ ಬಂಧನಬದ್ಧೋ ನ ಪ್ರಾಪ್ನೋತಿ ವಿಮೋಕ್ಷಮ್ ।
ತಥಾ ಬಂಧಾಂಶ್ಚಿಂತಯನ್ ಜೀವೋऽಪಿ ನ ಪ್ರಾಪ್ನೋತಿ ವಿಮೋಕ್ಷಮ್ ॥೨೯೧॥

ಬಂಧಚಿಂತಾಪ್ರಬಂಧೋ ಮೋಕ್ಷಹೇತುರಿತ್ಯನ್ಯೇ, ತದಪ್ಯಸತ್; ನ ಕರ್ಮಬದ್ಧಸ್ಯ ಬಂಧಚಿಂತಾಪ್ರಬಂಧೋ ಮೋಕ್ಷಹೇತುಃ, ಅಹೇತುತ್ವಾತ್, ನಿಗಡಾದಿಬದ್ಧಸ್ಯ ಬಂಧಚಿಂತಾಪ್ರಬಂಧವತ್ । ಏತೇನ ಕರ್ಮಬಂಧವಿಷಯಚಿಂತಾಪ್ರಬಂಧಾತ್ಮಕವಿಶುದ್ಧಧರ್ಮಧ್ಯಾನಾಂಧಬುದ್ಧಯೋ ಬೋಧ್ಯಂತೇ ।

ಭಾವಾರ್ಥ :- ಬಂಧದ ಸ್ವರೂಪವನ್ನು ಕೇವಲ ತಿಳಿದುಕೊಳ್ಳುವುದರಿಂದಲೇ ಮೋಕ್ಷವಾಗಿ ಬಿಡುತ್ತದೆಂದು ಕೆಲವು ಅನ್ಯಮತದವರು ನಂಬಿಕೊಂಡಿದ್ದಾರೆ. ಅವರ ಈ ನಂಬುಗೆಯನ್ನು ಈ ಕಥನದಿಂದ ನಿರಾಕರಿಸಿಬಿಡಲಾಗಿದೆ. ಕೇವಲ ತಿಳಿದುಕೊಳ್ಳುವುದರಿಂದಲೇ ಬಂಧನವು ಕಳಚಿಹೋಗುವುದಿಲ್ಲ, ಆದರೆ ಅದನ್ನು ಕತ್ತರಿಸುವುದರಿಂದಲೇ ಕಳಚಿಹೋಗುತ್ತದೆ.

ಬಂಧದ ವಿಚಾರ ಮಾಡುತ್ತ ಇರುವುದರಿಂದಲೂ ಬಂಧನವು ಕಳಚುವುದಿಲ್ಲವೆಂಬುದನ್ನು ಈಗ ಗಾಥಾಸೂತ್ರದಿಂದ ಹೇಳುತ್ತಾರೆ,–

ಗಾಥೆ - ೨೯೧

ಗಾಥಾರ್ಥ :- [ಜಹ] ಯಾವ ಪ್ರಕಾರ [ಬಂಧಣಬದ್ಧೋ] ಬಂಧನಗಳಿಂದ ಬದ್ಧನಾದ ಪುರುಷನು [ಬಂಧೇ ಚಿಂತಂತೋ] ಬಂಧನಗಳ ವಿಚಾರಮಾಡುವುದರಿಂದ [ವಿಮೋಕ್ಖಂ ಣ ಪಾವದಿ] ಮೋಕ್ಷವನ್ನು ಪಡೆಯಲಾರನು (ಎಂದರೆ ಬಿಡುಗಡೆ ಹೊಂದಲಾರನು), [ತಹ] ಇದೇ ಪ್ರಕಾರ [ಜೀವೋ ವಿ] ಜೀವನೂ [ಬಂಧೇ ಚಿಂತಂತೋ] ಬಂಧನಗಳ ವಿಚಾರಮಾಡುವುದರಿಂದ [ವಿಮೋಕ್ಖಂ ಣ ಪಾವದಿ] ಮುಕ್ತಿಯನ್ನು ಪಡೆಯಲಾರನು.

ಟೀಕೆ :- 'ಬಂಧದ ಸಂಬಂಧವಾದ ವಿಚಾರಶೃಂಖಲೆಯು ಮೋಕ್ಷಕ್ಕೆ ಕಾರಣವಾಗಿದೆ'ಯೆಂದು ಇತರ ಅದಷ್ಟೋ ಜನರು ಹೇಳುತ್ತಾರೆ, ಆದರೆ ಇದೂ ಕೂಡ ಅಸತ್ಯವಾಗಿದೆ; ಕರ್ಮದಿಂದ ಕಟ್ಟಲ್ಪಟ್ಟ ಜೀವನಿಗೆ ಬಂಧದ ಸಂಬಂಧವಾದ ವಿಚಾರದ ಶೃಂಖಲೆಯು ಮೋಕ್ಷಕ್ಕೆ ಕಾರಣವಾಗಿಲ್ಲ, ಏಕೆಂದರೆ ಯಾವ ಪ್ರಕಾರ ಸಂಕಲೆ ಮೊದಲಾದವುಗಳಿಂದ ಬದ್ಧನಾದ ಪುರುಷನಿಗೆ ಆ ಬಂಧನದ ಸಂಬಂಧವಾದ ವಿಚಾರ ಶೃಂಖಲೆಯು (-ವಿಚಾರದ ಪರಂಪರೆಯು) ಬಂಧನದಿಂದ ಬಿಡುಗಡೆ ಹೊಂದುವುದಕ್ಕೆ ಕಾರಣವಾಗಿಲ್ಲ, ಅದೇ ಪ್ರಕಾರ ಕರ್ಮಗಳಿಂದ ಬದ್ಧನಾದ ಪುರುಷನಿಗೆ ಕರ್ಮಬಂಧನದ ಸಂಬಂಧವಾದ ವಿಚಾರಶೃಂಖಲೆಯು ಕರ್ಮಬಂಧನದಿಂದ

ಹೇಗೆ ಬಂಧನಕ್ಕೊಳಗಾದವನು ಬಂಧನದ ವಿಚಾರದಿಂ ಮುಕ್ತನಾಗನು ।
ಹಾಗೆ ಜೀವನು ಬಂಧನಗಳ ವಿಚಾರಮಾಡುವುದರಿಂ ತಾ ಮುಕ್ತನಾಗನು ॥೨೯೧॥

ಕಸ್ತರ್ಹಿ ಮೋಕ್ಷಹೇತುರಿತಿ ಚೇತ್—

ಜಹ ಬಂಧೇ ಛೇತ್ತೂಣ ಯ ಬಂಧಣಬದ್ಧೋ ದು ಪಾವದಿ ವಿಮೋಕ್ಖಂ ।
ತಹ ಬಂಧೇ ಛೇತ್ತೂಣ ಯ ಜೀವೋ ಸಂಪಾವದಿ ವಿಮೋಕ್ಖಂ ॥೨೯೨॥

ಯಥಾ ಬಂಧಾಂಶ್ಛಿತ್ತ್ವಾ ಚ ಬಂಧನಬದ್ಧಸ್ತು ಪ್ರಾಪ್ನೋತಿ ವಿಮೋಕ್ಷಮ್ ।
ತಥಾ ಬಂಧಾಂಶ್ಛಿತ್ತ್ವಾ ಚ ಜೀವಃ ಸಂಪ್ರಾಪ್ನೋತಿ ವಿಮೋಕ್ಷಮ್ ॥೨೯೨॥

ಕರ್ಮಬದ್ಧಸ್ಯ ಬಂಧಚ್ಛೇದೋ ಮೋಕ್ಷಹೇತುಃ, ಹೇತುತ್ವಾತ್, ನಿಗಡಾದಿಬದ್ಧಸ್ಯ ಬಂಧಚ್ಛೇದವತ್ । ಏತೇನ ಉಭಯೇಽಪಿ ಪೂರ್ವೇ ಆತ್ಮಬಂಧಯೋರ್ದ್ವಿಧಾಕರಣೇ ವ್ಯಾಪಾರ್ಯೇತೇ ।

ಬಿಡುಗಡೆ ಹೊಂದುವುದಕ್ಕೆ ಕಾರಣವಾಗಿಲ್ಲ. ಕರ್ಮಬಂಧಸಂಬಂಧದ ವಿಚಾರಶೃಂಖಲಾತ್ಮವಾದ ವಿಶುದ್ಧ (—ಶುಭ) ಧರ್ಮಧ್ಯಾನದಿಂದ ಯಾರಬುದ್ಧಿಯು ಕುರುಡಾಗಿದೆ ಅವರಿಗೆ (ಈ ಕಥನದಿಂದ) ತಿಳಿಸಿಕೊಡಲಾಗಿದೆ.

ಭಾವಾರ್ಥ :- ಕರ್ಮಬಂಧನದ ಚಿಂತೆಯಲ್ಲಿ ಮನಸ್ಸು ತೊಡಗಿಹೋದರೂ ಮೋಕ್ಷವಾಗುವುದಿಲ್ಲ. ಇದಂತೂ ಧರ್ಮಧ್ಯಾನಸ್ವರೂಪವಾದ ಶುಭಪರಿಣಾಮವಿದೆ. ಯಾರು ಕೇವಲ ಶುಭಪರಿಣಾಮದಿಂದಲೇ ಮೋಕ್ಷವಾಗುತ್ತದೆಂದು ನಂಬಿಕೊಂಡಿದ್ದಾರೆ ಅವರಿಗೆ ಶುಭಪರಿಣಾಮದಿಂದ ಮೋಕ್ಷವಾಗುವುದಿಲ್ಲವೆಂದು ಇಲ್ಲಿ ಉಪದೇಶಿಸಲಾಗಿದೆ.

''(ಬಂಧದ ಸ್ವರೂಪದ ಜ್ಞಾನಮಾತ್ರದಿಂದಲೂ ಮೋಕ್ಷವಾಗುವುದಿಲ್ಲ ಮತ್ತು ಬಂಧದ ವಿಚಾರಮಾಡುವುದರಿಂದಲೂ ಮೋಕ್ಷವಾಗುವುದಿಲ್ಲ) ವೆಂದಮೇಲೆ ಮೋಕ್ಷದ ಕಾರಣವಾದರೂ ಯಾವುದಿದೆ?''— —ಎಂಬ ಪ್ರಶ್ನೆಯುಂಟಾದನಂತರ ಈಗ ಮೋಕ್ಷದ ಉಪಾಯವನ್ನು ತಿಳಿಸಿಕೊಡುತ್ತಾರೆ.—

ಗಾಥೆ - ೨೯೨

ಗಾಥಾರ್ಥ :- [ಜಹ ಯ] ಯಾವ ಪ್ರಕಾರ [ಬಂಧಣಬದ್ಧೋ ದು] ಬಂಧನದಿಂದ ಕಟ್ಟಲ್ಪಟ್ಟ ಪುರುಷನು [ಬಂಧೇ ಛೇತ್ತೂಣ] ಕಟ್ಟನ್ನು ಕತ್ತರಿಸಿ [ವಿಮೋಕ್ಖಂ ಪಾವದಿ] ಮೋಕ್ಷವನ್ನು (ಬಿಡುಗಡೆಯನ್ನು) ಪಡೆಯುತ್ತಾನೆ, [ತಹ ಯ] ಅದೇ ಪ್ರಕಾರ [ಜೀವೋ] ಜೀವನು [ಬಂಧೇ ಛೇತ್ತೂಣ] ಬಂಧನಗಳನ್ನು (ಕಟ್ಟುಗಳನ್ನು) ಕತ್ತರಿಸಿಹಾಕಿ [ವಿಮೋಕ್ಖಂ ಸಂಪಾವದಿ] ಮೋಕ್ಷವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಟೀಕೆ :- ಕರ್ಮದಿಂದ ಕಟ್ಟಲ್ಪಟ್ಟ ಪುರುಷನಿಗೆ ಆ ಬಂಧನದ ವಿಚ್ಛೇದವೇ ಮೋಕ್ಷದ ಕಾರಣವಾಗಿದೆ, ಏಕೆಂದರೆ ಯಾವ ಪ್ರಕಾರ ಸಂಕಲೆ ಮೊದಲಾದವುಗಳಿಂದ ಬದ್ಧನಾದವನಿಗೆ ಆ ಬಂಧನದ ಛೇದವೇ ಬಂಧ ವಿಮೋಚನೆಗೆ ಕಾರಣವಾಗಿರುವಂತೆ ಕರ್ಮದಿಂದ ಕಟ್ಟಲ್ಪಟ್ಟವನಿಗೆ ಆ ಕರ್ಮಬಂಧನದ ಛೇದವೇ ಕರ್ಮ ಬಂಧನದಿಂದ ಬಿಡುಗಡೆ ಪಡೆಯುವುದಕ್ಕೆ ಕಾರಣವಾಗಿದೆ. ಈ (ಕಥನದಿಂದ) ಮೊದಲು ಹೇಳಿದ ಇಬ್ಬರಿಗೆ

ಹೇಗೆ ಬಂಧನಕ್ಕೊಳಗಾದವನು ಬಂಧನದಛೇದದಿಂ ಮುಕ್ತನಾಗುವನು ।
ಹಾಗೆ ಜೀವನು ಬಂಧನಗಳ ಕಡಿದೊಗೆದು ಮುಕ್ತಿಯನು ಪಡೆಯುವನು ॥೨೯೨॥

ಕಿಮಯಮೇವ ಮೋಕ್ಷಹೇತುರಿತಿ ಚೇತ್–

ಬಂಧಾಣಂ ಚ ಸಹಾವಂ ವಿಯಾಣಿದುಂ ಅಪ್ಪಣೋ ಸಹಾವಂ ಚ ।
ಬಂಧೇಸು ಜೋ ವಿರಜ್ಜದಿ ಸೋ ಕಮ್ಮವಿಮೋಕ್ಖಣಂ ಕುಣದಿ ॥೨೯೩॥

ಬಂಧಾನಾಂ ಚ ಸ್ವಭಾವಂ ವಿಜ್ಞಾಯಾತ್ಮನಃ ಸ್ವಭಾವಂ ಚ ।
ಬಂಧೇಷು ಯೋ ವಿರಜ್ಯತೇ ಸ ಕರ್ಮವಿಮೋಕ್ಷಣಂ ಕರೋತಿ ॥೨೯೩॥

ಯ ಏವ ನಿರ್ವಿಕಾರಚೈತನ್ಯಚಮತ್ಕಾರಮಾತ್ರಮಾತ್ಮಸ್ವಭಾವಂ ತದ್ವಿಕಾರಕಾರಕಂ ಬಂಧಾನಾಂ ಚ ಸ್ವಭಾವಂ ವಿಜ್ಞಾಯ, ಬಂಧೇಭ್ಯೋ ವಿರಮತಿ, ಸ ಏವ ಸಕಲಕರ್ಮಮೋಕ್ಷಂ ಕುರ್ಯಾತ್ । ಏತೇನಾತ್ಮಬಂಧಯೋರ್ದ್ವಿಧಾಕರಣಸ್ಯ ಮೋಕ್ಷಹೇತುತ್ವಂ ನಿಯಮ್ಯತೇ ।

(ಯಾರು ಬಂಧದ ಸ್ವರೂಪದ ಜ್ಞಾನಮಾತ್ರದಿಂದ ಸಂತುಷ್ಟರಿದ್ದಾರೆ ಹಾಗೂ ಯಾರು ಬಂಧದ ವಿಚಾರ ಮಾಡುತ್ತಲಿದ್ದಾರೆ ಅವರಿಗೆ) ಆತ್ಮ ಮತ್ತು ಬಂಧದ ವಿಭಾಗಣೆಯಲ್ಲಿ ಉದ್ಯೋಗ ಮಾಡಿಸಲಾಗುತ್ತದೆ (ಎಂದರೆ ಆತ್ಮ ಮತ್ತು ಬಂಧವನ್ನು ಬೇರೆ ಬೇರೆ ಮಾಡುವ ಕುರಿತು ತೊಡಗಿಸಲಾಗುತ್ತದೆ–ಕರ್ತವ್ಯ ಮಾಡಿಸಲಾಗುತ್ತದೆ).

'ಕೇವಲ ಇದೇ (ಬಂಧಚ್ಛೇದವೇ) ಮೋಕ್ಷದ ಕಾರಣವೇಕಾಗಿದೆ?'–ಯೆಂಬ ಪ್ರಶ್ನೆಯ ಉತ್ತರವನ್ನು ಈಗ ಗಾಥಾಸೂತ್ರದಿಂದ ಹೇಳುತ್ತಾರೆ,–

ಗಾಥೆ - ೨೯೩

ಗಾಥಾರ್ಥ :- [ಬಂಧಾಣಂ ಸಹಾವಂ ಚ] ಬಂಧಗಳ ಸ್ವಭಾವವನ್ನು [ಅಪ್ಪಣೋ ಸಹಾವಂ ಚ] ಮತ್ತು ಆತ್ಮನ ಸ್ವಭಾವವನ್ನು [ವಿಯಾಣಿದುಂ] ತಿಳಿದುಕೊಂಡು [ಬಂಧೇಸು] ಬಂಧಗಳ ಕುರಿತು [ಜೋ] ಯಾವನು [ವಿರಜ್ಜದಿ] ವಿರಕ್ತನಾಗುತ್ತಾನೆ, [ಸೋ] ಅವನು [ಕಮ್ಮವಿಮೋಕ್ಖಣಂ ಕುಣದಿ] ಕರ್ಮಗಳಿಂದ ಬಿಡುಗಡೆ ಪಡೆಯುತ್ತಾನೆ.

ಟೀಕೆ — ಯಾವನು ನಿರ್ವಿಕಾರ ಚೈತನ್ಯ ಚಮತ್ಕಾರಮಾತ್ರವಾದ ಆತ್ಮಸ್ವಭಾವವನ್ನು ಮತ್ತು ಅವನಿಗೆ (ಆತ್ಮನಿಗೆ) ವಿಕಾರವನ್ನುಂಟುಮಾಡುವಂಥ ಬಂಧದ ಸ್ವಭಾವವನ್ನು ತಿಳಿದುಕೊಂಡು, ಬಂಧಗಳಿಂದ ವಿರಕ್ತನಾಗುತ್ತಾನೆ ಅವನೇ ಎಲ್ಲ ಕರ್ಮಗಳಿಂದ ಬಿಡುಗಡೆ ಹೊಂದುತ್ತಾನೆ. ಇದರಿಂದ (ಕಥನದಿಂದ) ಆತ್ಮ ಮತ್ತು ಬಂಧದ ವಿಭಾಗಣೆಯೇ (ಪೃಥಕ್ಕರಣವೇ) ಮೋಕ್ಷಕ್ಕೆ ಕಾರಣವಾಗಿದೆಯೆಂಬುದರ ನಿಶ್ಚಯವಾಗಿ ಬಿಡುತ್ತದೆ. (ಎಂದರೆ ಆತ್ಮ ಮತ್ತು ಬಂಧವನ್ನು ಬೇರೆ ಬೇರೆ ಮಾಡುವುದೇ ಮೋಕ್ಷದ ಕಾರಣವಾಗಿದೆಯೆಂಬ ನಿರ್ಣಯವನ್ನು ಮಾಡಲಾಗುತ್ತದೆ.)

'ಆತ್ಮ ಮತ್ತು ಬಂಧ ಇವೆರಡನ್ನು ಯಾವ ಸಾಧನೆಯಿಂದ ವಿಭಾಗ (ಬೇರೆ-ಬೇರೆ) ಮಾಡಲಾಗುತ್ತದೆ?'– ಎಂಬ ಪ್ರಶ್ನೆಯ ಉತ್ತರವನ್ನು ಗಾಥಾಸೂತ್ರದಿಂದ ಕೊಡುತ್ತಾರೆ,–

ಬಂಧನಗಳ ಸ್ವಭಾವವನು ಮೇಣಾತ್ಮಸ್ವಭಾವವನರಿತುಕೊಂಡು ।
ಬಂಧನಗಳಿಂದಾವ ಮುಕ್ತನಾಗುವನವನು ಕರ್ಮಗಳಿಂ ಮುಕ್ತನಾಗುವನು ॥೨೯೩॥

ಕೇನಾತ್ಮಬಂಧೌ ದ್ವಿಧಾ ಕ್ರಿಯೇತೇ ಇತಿ ಚೇತ್—

ಜೀವೋ ಬಂಧೋ ಯ ತಹಾ ಛಿಜ್ಜಂತಿ ಸಲಕ್ಖಣೇಹಿಂ ಣಿಯಏಹಿಂ ।
ಪಣ್ಣಾಛೇದಣಏಣ ದು ಛಿಣ್ಣಾ ಣಾಣತ್ತಮಾವಣ್ಣಾ ॥೨೯೪॥

ಜೀವೋ ಬಂಧಶ್ಚ ತಥಾ ಛಿದ್ಯೇತೇ ಸ್ವಲಕ್ಷಣಾಭ್ಯಾಂ ನಿಯತಾಭ್ಯಾಮ್ ।
ಪ್ರಜ್ಞಾಛೇದನಕೇನ ತು ಛಿನ್ನೌ ನಾನಾತ್ವಮಾಪನ್ನೌ ॥೨೯೪॥

ಆತ್ಮಬಂಧಯೋರ್ದ್ವಿಧಾಕರಣೇ ಕಾರ್ಯೇ ಕರ್ತುರಾತ್ಮನಃ ಕರಣಮೀಮಾಂಸಾಯಾಂ, ನಿಶ್ಚಯತಃ ಸ್ವತೋ ಭಿನ್ನಕರಣಾಸಂಭವಾತ್, ಭಗವತೀ ಪ್ರಜ್ಞೈವ ಛೇದನಾತ್ಮಕಂ ಕರಣಮ್ । ತಯಾ ಹಿ ತೌ ಛಿನ್ನೌ ನಾನಾತ್ವಮವಶ್ಯಮೇವಾಪದ್ಯೇತೇ; ತತಃ ಪ್ರಜ್ಞಯೈವಾತ್ಮಬಂಧಯೋರ್ದ್ವಿಧಾಕರಣಮ್ । ನನು ಕಥಮಾತ್ಮಬಂಧೌ ಚೇತ್ಯಚೇತಕಭಾವೇನಾತ್ಯಂತಪ್ರತ್ಯಾಸತ್ತೇರೇಕೀಭೂತೌ ಭೇದವಿಜ್ಞಾನಾಭಾವಾದೇಕ-ಚೇತಕವದ್ವ್ಯವಹ್ರಿಯಮಾಣೌ ಪ್ರಜ್ಞಯಾ ಛೇತ್ತುಂ ಶಕ್ಯೇತೇ? ನಿಯತಸ್ವಲಕ್ಷಣಸೂಕ್ಷ್ಮಾಂತಃಸಂಧಿ-ಸಾವಧಾನನಿಪಾತನಾದಿತಿ ಬುಧ್ಯೇಮಹಿ । ಆತ್ಮನೋ ಹಿ ಸಮಸ್ತಶೇಷದ್ರವ್ಯಾಸಾಧಾರಣತ್ವಾಚ್ಚೈತನ್ಯಂ

ಗಾಥಾ - ೨೯೪

ಗಾಥಾರ್ಥ :- [ಜೀವೋ ಯ ತಹಾ ಬಂಧೋ] ಜೀವ ಹಾಗೂ ಬಂಧ ಇವೆರಡೂ [ಣಿಯಏಹಿಂ ಸಲಕ್ಖಣೇಹಿಂ] ನಿಯತಸ್ವಲಕ್ಷಣಗಳಿಂದ (ತಮ್ಮ-ತಮ್ಮ ನಿಶ್ಚಿತ ಲಕ್ಷಣಗಳಿಂದ [ಛಿಜ್ಜಂತಿ] ಛೇದಿಸಲ್ಪಡುತ್ತವೆ; [ಪಣ್ಣಾಛೇದಣಏಣ] ಪ್ರಜ್ಞೆಯೆಂಬ ಚೇಣದಿಂದ [ಛಿಣ್ಣಾ ದು] ಛೇದಿಸಿದನಂತರ [ಣಾಣತ್ತ-ಮಾವಣ್ಣಾ] ಅವು ನಾನಾತನಕ್ಕೆ ಪ್ರಾಪ್ತವಾಗುತ್ತವೆ ಎಂದರೆ ಬೇರೆಯಾಗಿಬಿಡುತ್ತವೆ.

ಟೀಕೆ :- ಆತ್ಮ ಮತ್ತು ಬಂಧ ಇವೆರಡರ ವಿಭಾಗಣೆಮಾಡುವ ಕಾರ್ಯದಲ್ಲಿ ಯಾವ ಕರ್ತೃವಾದ ಆತ್ಮನು ಅದರ ಕರಣದ* ಸಂಬಂಧವಾಗಿ ಮೀಮಾಂಸೆ† ಮಾಡಿದನಂತರ, ನಿಶ್ಚಯವಾಗಿ (ನಿಶ್ಚಯನಯದಿಂದ) ತನ್ನಿಂದ ಭಿನ್ನವಾದ ಕರಣದ ಅಭಾವವಿರುವುದರಿಂದ ಭಗವತೀಯೆನಿಸಿದ ಪ್ರಜ್ಞೆಯೇ (ಜ್ಞಾನಸ್ವರೂಪವಾದ ಬುದ್ಧಿಯೇ) ಛೇದನಸ್ವರೂಪವುಳ್ಳ (ಛೇದನದ ಸ್ವಭಾವವುಳ್ಳ) ಕರಣವಿದೆ. ಆ ಪ್ರಜ್ಞೆಯ ಮುಖಾಂತರ ಅವುಗಳನ್ನು ಛೇದಿಸಿದ ನಂತರ ಅವು ಅವಶ್ಯವಾಗಿಯೇ ಅನೇಕತೆಗೆ ಪ್ರಾಪ್ತವಾಗುತ್ತವೆ; ಅದ್ದರಿಂದ ಪ್ರಜ್ಞೆಯಿಂದಲೇ ಆತ್ಮ

ಜೀವ-ಬಂಧಗಳು ಸ್ವಲಕ್ಷಣಗಳಿಂದ ನಿಶ್ಚಯದಿ ಛೇದಿಸಲ್ಪಡುವವು ।
ಅವನು ಪ್ರಜ್ಞೆಯೆಂಬ ಚೇಣದಿಂ ಛೇದಿಸಲವೆರಡು ಭಿನ್ನಭಿನ್ನವಾಗುವವು ॥೨೯೪॥

---

* ಕರಣ = ಸಾಧನ; ಕರಣವೆಂಬ ಹೆಸರಿನ ಕಾರಕ. † ಮೀಮಾಂಸೆ = ಆಳವಾದ ವಿಚಾರ; ಸಮಾಲೋಚನೆ; ಅನ್ವೇಷಣೆ.

ಸ್ವಲಕ್ಷಣಮ್ । ತತ್ತು ಪ್ರವರ್ತಮಾನಂ ಯದ್ಯದಭಿವ್ಯಾಪ್ಯಪ್ರವರ್ತತೇ ನಿವರ್ತಮಾನಂ ಚ ಯದ್ಯದುಪಾದಾಯ ನಿವರ್ತತೇ ತತ್ತತ್ಸಮಸ್ತಮಪಿ ಸಹಪ್ರವೃತ್ತಂ ಕ್ರಮಪ್ರವೃತ್ತಂ ವಾ ಪರ್ಯಾಯಜಾತಮಾತ್ಮೇತಿ ಲಕ್ಷಣೀಯಃ, ತದೇಕಲಕ್ಷಣಲಕ್ಷ್ಯತ್ವಾತ್; ಸಮಸ್ತಸಹಕ್ರಮಪ್ರವೃತ್ತಾನಂತಪರ್ಯಾಯಾವಿನಾಭಾವಿತ್ವಾಚ್ಚೈತನ್ಯಸ್ಯ ಚಿನ್ಮಾತ್ರ ಏವಾತ್ಮಾ ನಿಶ್ಚೇತವ್ಯಃ, ಇತಿ ಯಾವತ್ । ಬಂಧಸ್ಯ ತು ಆತ್ಮದ್ರವ್ಯಾಸಾಧಾರಣಾ ರಾಗಾದಯಃ ಸ್ವಲಕ್ಷಣಮ್ । ನ ಚ ರಾಗಾದಯ ಆತ್ಮದ್ರವ್ಯಸಾಧಾರಣತಾಂ ಬಿಭ್ರಾಣಾಃ ಪ್ರತಿಭಾಸಂತೇ, ನಿತ್ಯಮೇವ ಚೈತನ್ಯಚಮತ್ಕಾರಾದತಿರಿಕ್ತತ್ವೇನ ಪ್ರತಿಭಾಸಮಾನತ್ವಾತ್ । ನ ಚ ಯಾವದೇವ ಸಮಸ್ತಸ್ವಪರ್ಯಾಯವ್ಯಾಪಿ ಚೈತನ್ಯಂ ಪ್ರತಿಭಾತಿ ತಾವಂತ ಏವ ರಾಗಾದಯಃ ಪ್ರತಿಭಾಂತಿ,

ಮತ್ತು ಬಂಧ ಇವುಗಳ ವಿಭಾಗಣೆ ಮಾಡಲಾಗುತ್ತದೆ. (ಎಂದರೆ ಪ್ರಜ್ಞೆಯೆಂಬ ಕರಣದಿಂದಲೇ ಆತ್ಮ ಮತ್ತು ಬಂಧ ಇವೆರಡನ್ನು ಬೇರೆ ಮಾಡಲಾಗುತ್ತದೆ.)

(ಇಲ್ಲಿ ಹೀಗೆ ಪ್ರಶ್ನೆ ಉತ್ಪನ್ನವಾಗುತ್ತದೆ)–ಆತ್ಮ ಮತ್ತು ಬಂಧ ಇವೆರಡೂ ಚೇತ್ಯ-ಚೇತಕಭಾವದಿಂದ* ಅತ್ಯಂತ ಸಾಮೀಪ್ಯದ ಕಾರಣವಾಗಿ ಏಕರೂಪವಾಗುತ್ತವೆ, ಮತ್ತು ಭೇದವಿಜ್ಞಾನದ ಅಭಾವದ ಕಾರಣದಿಂದ, ಅವು ಒಂದು ಚೇತಕವೇ ಆಗಿವೆ ಎನ್ನುವಂತೆ ಯಾವ ವ್ಯವಹಾರ ಮಾಡಲಾಗುತ್ತದೆ, (ಎಂದರೆ ಯಾವುವನ್ನು ಒಂದು ಆತ್ಮನ ರೂಪದಲ್ಲಿಯೇ ವ್ಯವಹಾರದಲ್ಲಿ ಮನ್ನಿಸಲಾಗುತ್ತದೆ) ಅವನ್ನು ವಾಸ್ತವಿಕವಾಗಿ ಪ್ರಜ್ಞೆಯಿಂದಲೇ ಹೇಗೆ ಛೇದಿಸುವ ಸಾಧ್ಯತೆಯಿದೆ?

(ಪ್ರಶ್ನೆಗೆ ಉತ್ತರನೀಡುತ್ತ ಆಚಾರ್ಯದೇವರು ಹೀಗೆ ಹೇಳುತ್ತಾರೆ)–ಆತ್ಮ ಮತ್ತು ಬಂಧ ಇವುಗಳ ನಿಶ್ಚಿತ ಸ್ವಲಕ್ಷಣಗಳ ಸೂಕ್ಷ್ಮವಾದ ಅಂತಃಸಂಧಾನದಲ್ಲಿ (ಅಂತರಂಗದ ಬಿರುಕಿನಲ್ಲಿ) ಪ್ರಜ್ಞೆಯೆಂಬ ಚೇಣದಿಂದ ತುಂಬಾ ಎಚ್ಚರವಹಿಸಿ ಹೊಡೆಯುವುದರಿಂದ ಅದನ್ನು ಛೇದಿಸುವ ಸಾಧ್ಯತೆಯಿದೆ–ಎಂದರೆ ಅವನ್ನು ಬೇರೆ ಮಾಡಲಾಗುತ್ತದೆ; ಎಂಬುದಾಗಿ ನಾವು ತಿಳಿಯುತ್ತೇವೆ.

ಆತ್ಮನ ಸ್ವಲಕ್ಷಣವು ಚೈತನ್ಯವಾಗಿದೆ, ಏಕೆಂದರೆ ಅದು ಇತರ ಎಲ್ಲ ದ್ರವ್ಯಗಳಿಗಿಂತ ಅಸಾಧಾರಣವಾಗಿದೆ (ಅದು ಇತರ ದ್ರವ್ಯಗಳಲ್ಲಿಲ್ಲ). ಅದು (ಚೈತನ್ಯವು) ಪ್ರವರ್ತಮಾನವಾಗುತ್ತ ಯಾವ ಯಾವ ಪರ್ಯಾಯಗಳಲ್ಲಿ ವ್ಯಾಪ್ತವಾಗಿ ಪ್ರವರ್ತಿಸುತ್ತದೆ ಮತ್ತು ನಿವರ್ತಮಾನವಾಗುತ್ತ ಯಾವ ಯಾವ ಪರ್ಯಾಯಗಳನ್ನು ಗ್ರಹಣೆ ಮಾಡಿ ನಿವರ್ತಿಸುತ್ತದೆ ಆ ಎಲ್ಲ ಸಹವರ್ತಿ ಅಥವಾ ಕ್ರಮವರ್ತಿಪರ್ಯಾಯಗಳು ಆತ್ಮವಾಗಿದೆಯೆಂಬುದನ್ನು ಲಕ್ಷಣದ ಮೇಲಿಂದ ಗುರುತಿಸಿಕೊಳ್ಳಬೇಕಾಗುವುದು. (ಎಂದರೆ ಯಾವ ಯಾವ ಗುಣಪರ್ಯಾಯಗಳಲ್ಲಿ ಚೈತನ್ಯಲಕ್ಷಣವು ವ್ಯಾಪ್ತವಾಗುತ್ತದೆ ಆ ಎಲ್ಲ ಗುಣಪರ್ಯಾಯಗಳು ಆತ್ಮವಾಗಿದೆಯೆಂದು ತಿಳಿದುಕೊಳ್ಳಬೇಕು), ಏಕೆಂದರೆ ಆತ್ಮನು ಅದೊಂದೇ ಲಕ್ಷಣದಿಂದ ಲಕ್ಷಿತನಾಗಿದ್ದಾನೆ (ಎಂದರೆ ಚೈತನ್ಯ ಲಕ್ಷಣದಿಂದಲೇ ಗುರುತಿಸಲ್ಪಡುತ್ತಾನೆ). ಮತ್ತು ಎಲ್ಲ ಸಹವರ್ತಿ ಹಾಗೂ ಕ್ರಮವರ್ತಿಯಾದ ಅನಂತಪರ್ಯಾಯಗಳೊಡನೆ ಚೈತನ್ಯದ ಅವಿನಾಭಾವತ್ವವಿರುವುದರಿಂದ ಚಿನ್ಮಾತ್ರವೇ ಆತ್ಮನಾಗಿದ್ದಾನೆಂದು ನಿಶ್ಚಯಮಾಡಬೇಕು. ಆತ್ಮನ ಸ್ವಲಕ್ಷಣದ ಸಂಬಂಧದಲ್ಲಿ ಇಷ್ಟುಮಾತ್ರವಿದೆ.

* ಆತ್ಮನು ಚೇತಕನಿದ್ದರೆ ಬಂಧವು ಚೇತ್ಯವಿದೆ; ಅಜ್ಞಾನಾವಸ್ಥೆಯಲ್ಲಿ ಅವೆರಡೂ ಒಂದೇ ಇದ್ದಂತೆ ಅನುಭವದಲ್ಲಿ ಬರುತ್ತವೆ.

ರಾಗಾದೀನಂತರೇಣಾಪಿ ಚೈತನ್ಯಸ್ಯಾತ್ಮಲಾಭಸಂಭಾವನಾತ್ । ಯತ್ತು ರಾಗಾದೀನಾಂ ಚೈತನ್ಯೇನ ಸಹೈವೋತ್ಪ್ಲವನಂ ತಚ್ಚೇತ್ಯಚೇತಕಭಾವಪ್ರತ್ಯಾಸತ್ತೇರೇವ, ನೈಕದ್ರವ್ಯತ್ವಾತ್; ಚೇತ್ಯಮಾನಸ್ತು ರಾಗಾದಿರಾತ್ಮನಃ, ಪ್ರದೀಪ್ಯಮಾನೋ ಘಟಾದಿಃ ಪ್ರದೀಪಸ್ಯ ಪ್ರದೀಪಕತಾಮಿವ, ಚೇತಕತಾಮೇವ ಪ್ರಥಯೇತ್, ನ ಪುನಾ ರಾಗಾದಿತಾಮ್ । ಏವಮಪಿ ತಯೋರತ್ಯಂತಪ್ರತ್ಯಾಸತ್ತ್ಯಾ ಭೇದಸಂಭಾವನಾಭಾವಾದನಾದಿರಸ್ತ್ಯೇಕತ್ವವ್ಯಾಮೋಹಃ, ಸ ತು ಪ್ರಜ್ಞ ಯೈವ ಛಿದ್ಯತ ಏವ ।

(ಈಗ ಬಂಧದ ಸ್ವಲಕ್ಷಣದ ಸಂಬಂಧದಲ್ಲಿ ಹೇಳುತ್ತಾರೆ)—ಬಂಧದ ಸ್ವಲಕ್ಷಣವಂತೂ ಆತ್ಮದ್ರವ್ಯದಿಂದ ಅಸಾಧಾರಣವಾದಂಥ ರಾಗಾದಿಗಳಾಗಿವೆ. ಈ ರಾಗಾದಿಗಳು ಆತ್ಮದ್ರವ್ಯದೊಡನೆ ಸಾಧಾರಣತೆಯನ್ನು ಧರಿಸುತ್ತಿರುವಂತೆ ಕಂಡುಬರುವುದಿಲ್ಲ, ಏಕೆಂದರೆ ಅವು ಯಾವಾಗಲೂ ಚೈತನ್ಯ ಚಮತ್ಕಾರದಿಂದ ಭಿನ್ನರೂಪವಾಗಿಯೇ ಕಂಡುಬರುತ್ತವೆ. ಮತ್ತು ಎಷ್ಟು ಚೈತನ್ಯವು ಆತ್ಮನ ಸಮಸ್ತ ಪರ್ಯಾಯಗಳಲ್ಲಿ ವ್ಯಾಪ್ತವಾಗುತ್ತಿರುವುದು ಪ್ರತಿಭಾಸಿಸುತ್ತದೆ ಅಷ್ಟೇ ರಾಗಾದಿಗಳು ಪ್ರತಿಭಾಸಿಸುವುದಿಲ್ಲ, ಏಕೆಂದರೆ ರಾಗಾದಿಗಳಿಲ್ಲದೆಯೇ ಚೈತನ್ಯದ ಆತ್ಮ ಲಾಭವು ಸಂಭವವಿದೆ (ಎಂದರೆ ಎಲ್ಲಿ ರಾಗಾದಿಗಳಿರುವುದಿಲ್ಲ-ಅಲ್ಲಿಯೂ ಚೈತನ್ಯವು ಇರುತ್ತದೆ). ಮತ್ತು ಚೈತನ್ಯದೊಡನೆಯೇ ಯಾವ ರಾಗಾದಿಕದ ಉತ್ಪತ್ತಿಯಾಗುತ್ತದ ಅದು ಚೇತ್ಯ-ಚೇತಕಭಾವ (ಜ್ಞೇಯ-ಜ್ಞಾಯಕ ಭಾವ)ದ ಅತ್ಯಂತ ಸಾಮೀಪ್ಯದ ಕಾರಣದಿಂದಲೇ ಇದೆ, ಒಂದು ದ್ರವ್ಯತ್ವದ ಕಾರಣದಿಂದಿಲ್ಲ; ಯಾವ ಪ್ರಕಾರ (ದೀವಿಗೆಯ ಮುಖಾಂತರ) ಪ್ರಕಾಶಿತವಾಗುತ್ತಿರುವ ಘಟ ಮೊದಲಾದವು (ಪದಾರ್ಥಗಳು) ದೀವಿಗೆಯ ಪ್ರಕಾಶತನವನ್ನೇ ಪ್ರಕಟಪಡಿಸುತ್ತವೆ—ಘಟತ್ವ ಮೊದಲಾದುವನ್ನಲ್ಲ, ಇದೇ ಪ್ರಕಾರ (ಆತ್ಮನಿಂದ) ಚೇತಿತವಾಗುವಂಥ ರಾಗಾದಿಗಳು (ಎಂದರೆ ಜ್ಞಾನದಲ್ಲಿ ಜ್ಞೇಯರೂಪದಿಂದ ತಿಳಿದುಬರುವಂಥ ರಾಗಾದಿಭಾವಗಳು) ಆತ್ಮನ ಚೇತನತ್ವವನ್ನೇ ಪ್ರಕಟಪಡಿಸುತ್ತವೆ-ರಾಗಾದಿತನಗಳನ್ನಲ್ಲ.

ಹೀಗಿದ್ದರೂ ಕೂಡ ಅವೆರಡರ (ಆತ್ಮ ಮತ್ತು ಬಂಧ) ಅತ್ಯಂತ ಸಾಮೀಪ್ಯದ ಕಾರಣದಿಂದ ಭೇದ ಸಂಭಾವನೆಯ ಅಭಾವವಿರುವುದರಿಂದ ಎಂದರೆ ಭೇದವು ಕಂಡುಬರುವುದಿಲ್ಲವಾದ್ದರಿಂದ (ಅಜ್ಞಾನಿಗೆ) ಅನಾದಿ ಕಾಲದಿಂದ ಏಕತ್ವದ ವ್ಯಾಮೋಹ (ಭ್ರಾಂತಿ) ಇದೆ; ಆ ವ್ಯಾಮೋಹವು ಅವಶ್ಯವಾಗಿ ಪ್ರಜ್ಞೆಯಿಂದಲೇ ಛೇದಿಸಲ್ಪಡುತ್ತದೆ.

ಭಾವಾರ್ಥ :- ಆತ್ಮ ಮತ್ತು ಬಂಧ ಇವೆರಡನ್ನು ಲಕ್ಷಣಭೇದದಿಂದ ಗುರುತಿಸಿಕೊಂಡು ಬುದ್ಧಿರೂಪದ ಚೇಣದಿಂದ ಛೇದಿಸಿ ಬೇರೆ ಬೇರೆ ಮಾಡಬೇಕಾಗುವುದು.

ಆತ್ಮನಂತೂ ಅಮೂರ್ತಿಕನಾಗಿದ್ದಾನೆ ಮತ್ತು ಬಂಧವು ಸೂಕ್ಷ್ಮ ಪುದ್ಗಲಪರಮಾಣುಗಳ ಸ್ಕಂಧವಾಗಿರುವುದರಿಂದ ಛದ್ಮಸ್ಥನ ಜ್ಞಾನದಲ್ಲಿ ಇವೆರಡೂ ಭಿನ್ನವಾಗಿ ತಿಳಿದುಬರುವುದಿಲ್ಲ; ಕೇವಲ ಒಂದು ಸ್ಕಂಧವೇ ಕಂಡು ಬರುತ್ತದೆ (ಎಂದರೆ ಎರಡೂ ಒಂದು ಪಿಂಡರೂಪವಾಗಿ ಕಂಡುಬರುತ್ತವೆ); ಆದ್ದರಿಂದ ಅಜ್ಞಾನವು ಅನಾದಿಯಾಗಿದೆ. ಶ್ರೀಗುರುಗಳಿಂದ ಉಪದೇಶ ಪಡೆದು ಅವುಗಳ ಭಿನ್ನಭಿನ್ನ ಲಕ್ಷಣಗಳನ್ನು ಅನುಭವಿಸಿ ತಿಳಿದುಕೊಳ್ಳಬೇಕು.—ಕೇವಲ ಚೈತನ್ಯವಂತೂ ಆತ್ಮನ ಲಕ್ಷಣವಾಗಿದೆ ಮತ್ತು ರಾಗಾದಿಕವು ಬಂಧದ ಲಕ್ಷಣವಾಗಿದೆ, ಆದಾಗ್ಯೂ ಅವು ಜ್ಞೇಯಜ್ಞಾಯಕಭಾವದ ಅತ್ಯಂತ ಸಾಮೀಪ್ಯದಿಂದ ಒಂದೇ ಇದ್ದಂತೆ ಕಂಡು ಬರುತ್ತವೆ. ಅದಕ್ಕಾಗಿ ತೀಕ್ಷ್ಣವಾದ ಬುದ್ಧಿರೂಪದ ಚೇಣವನ್ನು-ಯಾವ ಅವನ್ನು ಭೇದಿಸಿ ಭಿನ್ನಮಾಡುವ ಶಸ್ತ್ರವಿದೆ ಅದನ್ನು-ಉಪಯೋಗಿಸಿ, ಅವುಗಳ ಸೂಕ್ಷ್ಮವಾದ ಬಿರುಕನ್ನು ಹುಡುಕಿ ಅದರಲ್ಲಿ ತುಂಬಾ ಎಚ್ಚರದಿಂದ

(ಸ್ರಗ್ಧರೆ)

ಪ್ರಜ್ಞಾಛೇತ್ರೀ ಶಿತೇಯಂ ಕಥಮಪಿ ನಿಪುಣೈಃ ಪಾತಿತಾ ಸಾವಧಾನೈಃ
ಸೂಕ್ಷ್ಮೇಽಂತಃಸಂಧಿಬಂಧೇ ನಿಪತತಿ ರಭಸಾದಾತ್ಮಕರ್ಮೋಭಯಸ್ಯ ।
ಆತ್ಮಾನಂ ಮಗ್ನಮಂತಃಸ್ಥಿರವಿಶದಲಸದ್ಧಾಮ್ನಿ ಚೈತನ್ಯಪೂರೇ
ಬಂಧಂ ಚಾಜ್ಞಾನಭಾವೇ ನಿಯಮಿತಮಭಿತಃ ಕುರ್ವತೀ ಭಿನ್ನಭಿನ್ನೌ ॥೧೮೧॥

(ಪ್ರಮಾದವಾಗದಂತೆ) ಹೊಡೆಯಬೇಕಾಗುವುದು. ಅದರ ಪೆಟ್ಟು ಬಿದ್ದೊಡನೆಯೇ ಎರಡೂ ಬೇರೆಬೇರೆಯಾಗಿ ಕಂಡುಬರತೊಡಗುತ್ತವೆ. ಮತ್ತು ಹೀಗಾದನಂತರ ಆತ್ಮನನ್ನು ಜ್ಞಾನದ ಭಾವದಲ್ಲಿಯೂ ಮತ್ತು ಬಂಧವನ್ನು ಅಜ್ಞಾನದ ಭಾವದಲ್ಲಿಯೂ ಇಡಬೇಕಾಗುವುದು. ಹೀಗೆ ಎರಡನ್ನೂ ಬೇರೆ ಮಾಡಬೇಕು.

ಈಗ ಇದೇ ಅರ್ಥದ ಕಲಶರೂಪದ ಕಾವ್ಯವನ್ನು ಹೇಳುತ್ತಾರೆ,—

ಶ್ಲೋಕಾರ್ಥ :- [ಇಯಂ ಶಿತಾ ಪ್ರಜ್ಞಾಛೇತ್ರಿ] ಈ ಪ್ರಜ್ಞಾರೂಪದ ತೀಕ್ಷ್ಣವಾದ ಚೇಣಿಯು [ನಿಪುಣೈಃ] ತಜ್ಞಪುರುಷರಿಂದ (ಕಥಂ ಅಪಿ) ಯಾವುದೇ ರೀತಿಯಿಂದ (ಪ್ರಯತ್ನಪೂರ್ವಕವಾಗಿ) [ಸಾವಧಾನೈಃ] ಎಚ್ಚರದಿಂದ (ಪ್ರಮಾದವಾಗದಂತೆ) [ಪಾತಿತಾ] ಅಪ್ಪಳಿಸಲ್ಪಟ್ಟನಂತರ [ಆತ್ಮ-ಕರ್ಮ-ಉಭಯಸ್ಯ ಸೂಕ್ಷ್ಮೇ ಅಂತಃಸಂಧಿಬಂಧೇ) ಆತ್ಮ ಮತ್ತು ಕರ್ಮ-ಇವೆರಡರ ಅಂತರಂಗದ ಸೂಕ್ಷ್ಮವಾದ ಬಿರುಕಿನ ಜೋಡಣೆಯಲ್ಲಿ [ರಭಸಾತ್] ಭರದಿಂದ [ನಿಪತತಿ] ಬೀಳುತ್ತದೆ. ಯಾವ ಪ್ರಕಾರ ಬೀಳುತ್ತದೆ? [ಆತ್ಮಾನಂ ಅಂತಃ-ಸ್ಥಿರ-ವಿಶದ-ಲಸದ್-ಧಾಮ್ನಿ ಚೈತನ್ಯಪೂರೇ ಮಗ್ನಂ] ಅದು ಆತ್ಮನನ್ನಂತೂ ಯಾರ ತೇಜಸ್ಸು ಅಂತರಂಗದಲ್ಲಿ ಸ್ಥಿರವಾಗಿದೆ ಮತ್ತು ನಿರ್ಮಲತೆಯಿಂದ ದೈದೀಪ್ಯಮಾನವಾಗಿದೆ ಅಂಥ ಚೈತನ್ಯ ಪ್ರವಾಹದಲ್ಲಿ ಮುಳುಗಿಸುತ್ತ [ಚ] ಮತ್ತು [ಬಂಧಂ ಅಜ್ಞಾನಭಾವೇ ನಿಯಮಿತಂ] ಬಂಧವನ್ನು ಅಜ್ಞಾನಭಾವದಲ್ಲಿ ನಿಶ್ಚಲ (ಸ್ಥಿರ) ಗೊಳಿಸುತ್ತ - [ಅಭಿತಃ ಭಿನ್ನಭಿನ್ನೌ ಕುರ್ವತೀ] ಹೀಗೆ ಆತ್ಮ ಮತ್ತು ಬಂಧವನ್ನು ಸಂಪೂರ್ಣವಾಗಿ ಭಿನ್ನಭಿನ್ನವಾಗಿ ಮಾಡುತ್ತ ಬೀಳುತ್ತದೆ.

ಭಾವಾರ್ಥ :- ಇಲ್ಲಿ ಆತ್ಮ ಮತ್ತು ಬಂಧವನ್ನು ಬೇರೆಬೇರೆಯಾಗಿ ಮಾಡುವ ಕಾರ್ಯವಿದೆ. ಅದರ ಕರ್ತೃವು ಆತ್ಮನಿದ್ದಾನೆ. ಅಲ್ಲಿ ಕರಣವಿಲ್ಲದೆ ಕರ್ತೃವು ಯಾವುದರಿಂದ ಕಾರ್ಯ ಮಾಡುವನು ? ಅದಕ್ಕಾಗಿ ಕರಣವು ಅವಶ್ಯಕವಿದೆ. ನಿಶ್ಚಯನಯದಿಂದ ಕರಣವು ಕರ್ತೃವಿನಿಂದ ಬೇರೆಯಾಗಿರುವುದಿಲ್ಲ; ಅದಕ್ಕಾಗಿ ಆತ್ಮನಿಂದ ಅಭಿನ್ನವಾದಂಥ ಈ ಬುದ್ಧಿಯೇ ಈ ಕಾರ್ಯದಲ್ಲಿ ಕರಣವಾಗಿದೆ. ಆತ್ಮನಿಗೆ ಅನಾದಿಯಾದ ಬಂಧವು ಜ್ಞಾನಾವರಣ ಮೊದಲಾದ ಕರ್ಮವಿದೆ, ಅದರ ಕಾರ್ಯವು ಭಾವಬಂಧರೂಪವಾಗಿ ರಾಗಾದಿಗಳಿದ್ದರೆ ನೋಕರ್ಮ ರೂಪವಾಗಿ ಶರೀರಾದಿಗಳಿವೆ. ಅದಕ್ಕಾಗಿ ಬುದ್ಧಿಯ ಮುಖಾಂತರ ಆತ್ಮನನ್ನು ಶರೀರದಿಂದ, ಜ್ಞಾನಾವರಣ ಮೊದಲಾದ ದ್ರವ್ಯಕರ್ಮದಿಂದ ಹಾಗೂ ರಾಗ ಮೊದಲಾದ ಭಾವಕರ್ಮದಿಂದ ಭಿನ್ನವಾದ ಒಂದು ಚೈತನ್ಯಭಾವ ಮಾತ್ರವಾದ ಅನುಭವ ಜ್ಞಾನದಲ್ಲಿಯೇ ಮಗ್ನವಾಗಿಡುವುದು ಇದುವೇ (ಆತ್ಮ ಮತ್ತು ಬಂಧವನ್ನು) ದೂರಮಾಡುವುದಿದೆ. ಇದರಿಂದಲೇ ಎಲ್ಲ ಕರ್ಮಗಳು ನಾಶಹೊಂದಿ ಸಿದ್ಧಪದವಿಯ ಪ್ರಾಪ್ತಿಯಾಗುತ್ತದೆಂದು ತಿಳಿದುಕೊಳ್ಳಬೇಕು. ॥೧೮೧॥

'ಆತ್ಮ ಮತ್ತು ಬಂಧ ಇವೆರಡನ್ನೂ ಬೇರೆಬೇರೆ ಮಾಡಿ ಪ್ರಯೋಜನವೇನು?' —ಎಂಬ ಪ್ರಶ್ನೆಯ ಉತ್ತರವನ್ನು ಗಾಥಾಸೂತ್ರದ ಮುಖಾಂತರ ಕೊಡುತ್ತಾರೆ,—

ಆತ್ಮಬಂಧೌ ದ್ವಿಧಾ ಕೃತ್ವಾ ಕಿಂ ಕರ್ತವ್ಯಮಿತಿ ಚೇತ್—

ಜೀವೋ ಬಂಧೋ ಯ ತಹಾ ಛಿಜ್ಜಂತಿ ಸಲಕ್ಖಣೇಹಿಂ ಣಿಯಏಹಿಂ ।
ಬಂಧೋ ಛೇದೇದವ್ವೋ ಸುದ್ಧೋ ಅಪ್ಪಾ ಯ ಘೇತ್ತವ್ವೋ ॥೨೯೫॥

ಜೀವೋ ಬಂಧಶ್ಚ ತಥಾ ಛಿದ್ಯೇತೇ ಸ್ವಲಕ್ಷಣಾಭ್ಯಾಂ ನಿಯತಾಭ್ಯಾಮ್ ।
ಬಂಧಶ್ಛೇತ್ತವ್ಯಃ ಶುದ್ಧ ಆತ್ಮಾ ಚ ಗೃಹೀತವ್ಯಃ ॥೨೯೫॥

ಆತ್ಮಬಂಧೌ ಹಿ ತಾವನ್ನಿಯತಸ್ವಲಕ್ಷಣವಿಜ್ಞಾನೇನ ಸರ್ವಥೈವ ಛೇತ್ತವ್ಯೌ; ತತೋ ರಾಗಾದಿ-ಲಕ್ಷಣಃ ಸಮಸ್ತ ಏವ ಬಂಧೋ ನಿರ್ಮೋಕ್ತವ್ಯಃ, ಉಪಯೋಗಲಕ್ಷಣಃ ಶುದ್ಧ ಆತ್ಮೈವ ಗೃಹೀತವ್ಯಃ । ಏತದೇವ ಕಿಲಾತ್ಮಬಂಧಯೋರ್ದ್ವಿಧಾಕರಣಸ್ಯ ಪ್ರಯೋಜನಂ ಯದ್ಬಂಧತ್ಯಾಗೇನ ಶುದ್ಧಾತ್ಮೋಪಾದಾನಮ್ ।

ಗಾಥೆ - ೨೯೫

ಗಾಥಾರ್ಥ :- [ತಹಾ] ಈ ಪ್ರಕಾರವಾಗಿ [ಜೀವೋ ಬಂಧೋ ಯ] ಜೀವ ಮತ್ತು ಬಂಧ-ಇವೆರಡೂ [ಣಿಯಏಹಿಂ ಸಲಕ್ಖಣೇಹಿಂ] ತಮ್ಮ ನಿಶ್ಚಿತವಾದ ಸ್ವಲಕ್ಷಣಗಳಿಂದ [ಛಿಜ್ಜಂತಿ] ಛೇದಿಸಲ್ಪಡುತ್ತವೆ. [ಬಂಧೋ] ಅಲ್ಲಿ ಬಂಧವನ್ನು [ಛೇದೇದವ್ವೋ] ಛೇದಿಸಬೇಕು ಎಂದರೆ ಬಿಟ್ಟು ಕೊಡಬೇಕು [ಯ] ಮತ್ತು [ಸುದ್ಧೋ ಅಪ್ಪಾ] ಶುದ್ಧ ಆತ್ಮನನ್ನು [ಘೇತ್ತವ್ವೋ] ಗ್ರಹಣೆ ಮಾಡಬೇಕು.

ಟೀಕೆ :- ಆತ್ಮ ಮತ್ತು ಬಂಧ-ಇವೆರಡನ್ನು ಮೊದಲಂತೂ ಅವುಗಳ ನಿಶ್ಚಿತವಾದ ಸ್ವಲಕ್ಷಣಗಳ ವಿಜ್ಞಾನದಿಂದ ಸಂಪೂರ್ಣವಾಗಿಯೇ ಛೇದಿಸಬೇಕು ಎಂದರೆ ಬೇರೆಬೇರೆ ಮಾಡಬೇಕು; ಅನಂತರ ರಾಗಾದಿಗಳು ಯಾವುದರ ಲಕ್ಷಣವಾಗಿವೆ ಅಂಥ ಸಮಸ್ತ ಬಂಧವನ್ನಂತೂ ಬಿಟ್ಟುಕೊಡಬೇಕು ಹಾಗೂ ಉಪಯೋಗವು ಯಾವುದರ ಲಕ್ಷಣವಾಗಿದೆ ಅಂಥ ಶುದ್ಧಾತ್ಮನನ್ನೇ ಗ್ರಹಣೆ ಮಾಡಬೇಕು. ಬಂಧದ ತ್ಯಾಗದಿಂದ (ಎಂದರೆ ಬಂಧದ ತ್ಯಾಗಮಾಡಿ) ಶುದ್ಧಾತ್ಮನನ್ನು ಗ್ರಹಣೆಮಾಡುವುದೇ ನಿಜವಾಗಿ ಆತ್ಮ ಮತ್ತು ಬಂಧ ಇವೆರಡನ್ನು ಬೇರೆ ಬೇರೆ ಮಾಡುವುದರ ಪ್ರಯೋಜನವಾಗಿದೆ.

ಭಾವಾರ್ಥ :- ಆತ್ಮ ಮತ್ತು ಬಂಧ ಇವೆರಡನ್ನು ಬೇರೆಬೇರೆ ಮಾಡುವುದರ ಪ್ರಯೋಜನವೇನು?- - ಎಂದು ಶಿಷ್ಯನು ಪ್ರಶ್ನಿಸಿದನು. ಅದಕ್ಕೆ ಬಂಧದ ತ್ಯಾಗಮಾಡುವುದು ಮತ್ತು ಶುದ್ಧಾತ್ಮನ ಗ್ರಹಣೆ ಮಾಡುವುದು ಎಂಬ ಉತ್ತರವನ್ನು ನೀಡಿದರು.

'ಆತ್ಮ ಮತ್ತು ಬಂಧ-ಇವೆರಡನ್ನು ಪ್ರಜ್ಞೆಯ ಮುಖಾಂತರ ಭಿನ್ನವನ್ನೇನೋ ಮಾಡಿತು, ಆದರೆ ಆತ್ಮನನ್ನು ಯಾವುದರ ಮುಖಾಂತರ ಸ್ವೀಕಾರ ಮಾಡುವುದು?'—ಎಂಬ ಪ್ರಶ್ನೆಯ ಹಾಗೂ ಅದರ ಉತ್ತರರೂಪವಾದ ಗಾಥಾಸೂತ್ರವನ್ನು ಹೇಳುತ್ತಾರೆ,—

ಜೀವ-ಬಂಧಗಳು ಸ್ವಲಕ್ಷಣಗಳಿಂದ ನಿಶ್ಚಯದಿ ಛೇದಿಸಲ್ಪಡುವವು ।
ಅವುಗಳಲಿ ಬಂಧವನುತ್ಯಜಿಸಿ ಶುದ್ಧಾತ್ಮನನು ಗ್ರಹಣೆ ಮಾಡುವುದು ॥೨೯೫॥

ಕಹ ಸೋ ಘಿಪ್ಪದಿ ಅಪ್ಪಾ ಪಣ್ಣಾಏ ಸೋ ದು ಘಿಪ್ಪದೇ ಅಪ್ಪಾ ।
ಜಹ ಪಣ್ಣಾಇ ವಿಭತ್ತೋ ತಹ ಪಣ್ಣಾಏವ ಘೇತ್ತವ್ವೋ ॥೨೯೬॥

ಕಥಂ ಸ ಗೃಹ್ಯತೇ ಆತ್ಮಾ ಪ್ರಜ್ಞಯಾ ಸ ತು ಗೃಹ್ಯತೇ ಆತ್ಮಾ ।
ಯಥಾ ಪ್ರಜ್ಞಯಾ ವಿಭಕ್ತಸ್ತಥಾ ಪ್ರಜ್ಞಯೈವ ಗೃಹೀತವ್ಯಃ ॥೨೯೬॥

ನನು ಕೇನ ಶುದ್ಧೋಽಯಮಾತ್ಮಾ ಗೃಹೀತವ್ಯಃ? ಪ್ರಜ್ಞಯೈವ ಶುದ್ಧೋಽಯಮಾತ್ಮಾ ಗೃಹೀತವ್ಯಃ, ಶುದ್ಧಸ್ಯಾತ್ಮನಃ ಸ್ವಯಮಾತ್ಮಾನಂ ಗೃಹ್ಣತೋ, ವಿಭಜತ ಇವ, ಪ್ರಜ್ಞೈಕಕರಣತ್ವಾತ್ । ಅತೋ ಯಥಾ ಪ್ರಜ್ಞಯಾ ವಿಭಕ್ತಸ್ತಥಾ ಪ್ರಜ್ಞಯೈವ ಗೃಹೀತವ್ಯಃ ।

ಗಾಥೆ - ೨೯೬

ಗಾಥಾರ್ಥ :- [ಸೋ ಅಪ್ಪಾ] ಆ (ಶುದ್ಧ) ಆತ್ಮನನ್ನು [ಕಹ] ಹೇಗೆ [ಘಿಪ್ಪದಿ] ಗ್ರಹಣ ಮಾಡಲಾಗುವುದು?-(ಎಂದು ಶಿಷ್ಯನು ಕೇಳುತ್ತಾನೆ) (ಅದಕ್ಕೆ ಆಚಾರ್ಯದೇವರು ಹೀಗೆ ಉತ್ತರ ಕೊಡುತ್ತಾರೆ)- [ಪಣ್ಣಾಏ ದು] ಪ್ರಜ್ಞೆಯ ಮುಖಾಂತರ [ಸೋ ಅಪ್ಪಾ] ಆ (ಶುದ್ಧ) ಆತ್ಮನನ್ನು [ಘಿಪ್ಪದೇ] ಗ್ರಹಣ ಮಾಡಲಾಗುತ್ತದೆ. [ಜಹ] ಯಾವ ಪ್ರಕಾರ [ಪಣ್ಣಾಇ] ಪ್ರಜ್ಞೆಯಿಂದ [ವಿಭತ್ತೋ] ಬೇರೆ ಮಾಡಲಾಯಿತು, [ತಹ] ಅದೇ ಪ್ರಕಾರ [ಪಣ್ಣಾಏವ] ಪ್ರಜ್ಞೆಯಿಂದಲೇ [ಘೇತ್ತವ್ವೋ] ಗ್ರಹಣ ಮಾಡಬೇಕಾಗುವುದು.

ಟೀಕೆ :- ಈ ಶುದ್ಧಾತ್ಮನನ್ನು ಯಾವುದರ ಮುಖಾಂತರ ಗ್ರಹಣ ಮಾಡಬೇಕು ? ಪ್ರಜ್ಞೆಯ ಮುಖಾಂತರವೇ ಈ ಶುದ್ಧಾತ್ಮನನ್ನು ಗ್ರಹಣ ಮಾಡಬೇಕಾಗುವುದು; ಏಕೆಂದರೆ ಶುದ್ಧಾತ್ಮನಿಗೆ ಸ್ವತಃ ತನ್ನನ್ನು ಗ್ರಹಣ ಮಾಡುವಲ್ಲಿ ಪ್ರಜ್ಞೆಯೊಂದೇ ಕರಣವಿದೆ–ಹೇಗೆ ಭಿನ್ನಮಾಡುವಲ್ಲಿ ಪ್ರಜ್ಞೆಯೊಂದೇ ಕರಣವಿತ್ತು. ಅದಕ್ಕಾಗಿ ಹೇಗೆ ಪ್ರಜ್ಞೆಯಿಂದಲೇ ಭಿನ್ನಮಾಡಲಾಗಿತ್ತು ಹಾಗೆ ಪ್ರಜ್ಞೆಯಿಂದಲೇ ಗ್ರಹಣ ಮಾಡಬೇಕು.

ಭಾವಾರ್ಥ :- ಬೇರೆ ಮಾಡುವಲ್ಲಿ ಮತ್ತು ಗ್ರಹಣ ಮಾಡುವಲ್ಲಿ ಕರಣವು ಬೇರೆಬೇರೆಯಾಗಿಲ್ಲ; ಅದಕ್ಕಾಗಿ ಪ್ರಜ್ಞೆಯಿಂದಲೇ ಆತ್ಮನನ್ನು ಬೇರೆ ಮಾಡಿದೆ ಮತ್ತು ಪ್ರಜ್ಞೆಯಿಂದಲೇ ಗ್ರಹಣ ಮಾಡಬೇಕಾಗುವುದು.

ಈ ಆತ್ಮನನ್ನು ಪ್ರಜ್ಞೆಯ ಮುಖಾಂತರ ಹೇಗೆ ಗ್ರಹಣ ಮಾಡಬೇಕಾಗುವುದು?–ಎಂಬ ಪ್ರಶ್ನೆಯ ಉತ್ತರವನ್ನು ಗಾಥಾಸೂತ್ರದಿಂದ ಹೇಳುತ್ತಾರೆ,–

ಹೇಗೆ ಆತ್ಮನನು ಗ್ರಹಿಸುವುದು ? ಆತ್ಮನನು ಪ್ರಜ್ಞೆಯಿಂ ಗ್ರಹಿಸುವುದು ।
ಹೇಗೆ ಪ್ರಜ್ಞೆಯಿಂ ಭಿನ್ನಮಾಡಿದೆ ಹಾಗೆ ಪ್ರಜ್ಞೆಯಿಂದಲೆ ಗ್ರಹಿಸಲಾಗುವದು ॥೨೯೬॥

ಕಥಮಯಮಾತ್ಮಾ ಪ್ರಜ್ಞಯಾ ಗೃಹೀತವ್ಯ ಇತಿ ಚೇತ್—

ಪಣ್ಣಾಏ ಘಿತ್ತವ್ವೋ ಜೋ ಚೇದಾ ಸೋ ಅಹಂ ತು ಣಿಚ್ಛಯದೋ ।
ಅವಸೇಸಾ ಜೇ ಭಾವಾ ತೇ ಮಜ್ಝ ಪರೇ ತ್ತಿ ಣಾದವ್ವಾ ॥೨೯೭॥

ಪ್ರಜ್ಞಯಾ ಗೃಹೀತವ್ಯೋ ಯಶ್ಚೇತಯಿತಾ ಸೋಽಹಂ ತು ನಿಶ್ಚಯತಃ ।
ಅವಶೇಷಾ ಯೇ ಭಾವಾಃ ತೇ ಮಮ ಪರಾ ಇತಿ ಜ್ಞಾತವ್ಯಾಃ ॥೨೯೭॥

ಯೋ ಹಿ ನಿಯತಸ್ವಲಕ್ಷಣಾವಲಂಬಿನ್ಯಾ ಪ್ರಜ್ಞಯಾ ಪ್ರವಿಭಕ್ತಶ್ಚೇತಯಿತಾ, ಸೋಽಯಮಹಂ; ಯೇ ತ್ವಮೀ ಅವಶಿಷ್ಟಾ ಅನ್ಯಸ್ವಲಕ್ಷಣಲಕ್ಷ್ಯಾ ವ್ಯವಹ್ರಿಯಮಾಣಾ ಭಾವಾಃ, ತೇ ಸರ್ವೇಽಪಿ ಚೇತಯಿತೃತ್ವಸ್ಯ ವ್ಯಾಪಕಸ್ಯ ವ್ಯಾಪ್ಯತ್ವಮನಾಯಾಂತೋಽತ್ಯಂತಂ ಮತ್ತೋ ಭಿನ್ನಾಃ । ತತೋಽಹಮೇವ ಮಯೈವ ಮಹ್ಯಮೇವ ಮತ್ತ ಏವ ಮಯ್ಯೇವ ಮಾಮೇವ ಗೃಹ್ಣಾಮಿ । ಯತ್ಕಿಲ ಗೃಹ್ಣಾಮಿ ತಚ್ಚೇತನೈಕಕ್ರಿಯತ್ವಾದಾತ್ಮನಶ್ಚೇತಯ ಏವ; ಚೇತಯಮಾನ ಏವ ಚೇತಯೇ, ಚೇತಯಮಾನೇನೈವ ಚೇತಯೇ, ಚೇತಯಮಾನಾಯೈವ ಚೇತಯೇ, ಚೇತಯಮಾನಾದೇವ ಚೇತಯೇ, ಚೇತಯಮಾನೇ ಏವ ಚೇತಯೇ, ಚೇತಯಮಾನಮೇವ ಚೇತಯೇ । ಅಥವಾ—ನ ಚೇತಯೇ; ನ ಚೇತಯಮಾನಶ್ಚೇತಯೇ, ನ ಚೇತಯಮಾನೇನ ಚೇತಯೇ, ನ ಚೇತಯಮಾನಾಯ ಚೇತಯೇ, ನ ಚೇತಯಮಾನಾಚ್ಚೇತಯೇ, ನ ಚೇತಯಮಾನೇ ಚೇತಯೇ, ನ ಚೇತಯಮಾನಂ ಚೇತಯೇ; ಕಿಂತು ಸರ್ವವಿಶುದ್ಧಚಿನ್ಮಾತ್ರೋ ಭಾವೋಽಸ್ಮಿ ।

ಗಾಥೆ - ೨೯೭

ಗಾಥಾರ್ಥ :- [ಜೋ ಚೇದಾ] ಯಾವ ಚೇತನಸ್ವರೂಪನಾದ ಆತ್ಮನಿದ್ದಾನೆ [ಸೋ ತು] ಅವನು [ಣಿಚ್ಛಯದೋ] ನಿಶ್ಚಯದಿಂದ [ಅಹಂ] ನಾನೇ ಇದ್ದೇನೆ, [ಅವಸೇಸಾ] ಉಳಿದ [ಜೇ ಭಾವಾ] ಯಾವ ಭಾವಗಳಿವೆ [ತೇ] ಅವು [ಮಜ್ಝ ಪರೇ] ನನ್ನಿಂದ ಬೇರೆಯಾಗಿವೆ [ತ್ತಿ] ಹೀಗೆ [ಪಣ್ಣಾಏ] ಪ್ರಜ್ಞೆಯ ಮುಖಾಂತರ [ಣಾದವ್ವಾ] ತಿಳಿದುಕೊಂಡು [ಘಿತ್ತವ್ವೋ] (ಆತ್ಮನನ್ನು) ಗ್ರಹಣೆ ಮಾಡಬೇಕು.

ಟೀಕೆ :- ನಿಶ್ಚಿತವಾಗಿ ತನ್ನ ಲಕ್ಷಣದ ಅವಲಂಬನೆ ಮಾಡುವಂಥ ಪ್ರಜ್ಞೆಯ ಮುಖಾಂತರ ಬೇರೆ ಮಾಡಲಾದ ಯಾವ ಈ ಚೇತಕ (ಚೈತನ್ಯಸ್ವರೂಪನಾದ ಆತ್ಮ)ನಿದ್ದಾನೆ ಅವನು ನಾನೇ ಇದ್ದೇನೆ; ಮತ್ತು ಇತರ ತನ್ನ ಲಕ್ಷಣಗಳಿಂದ ಲಕ್ಷ್ಯ (ಎಂದರೆ ಚೈತನ್ಯಲಕ್ಷಣವನ್ನು ಹೊರತುಪಡಿಸಿ ಇತರ ಲಕ್ಷಣಗಳಿಂದ ತಿಳಿಯಲು ಯೋಗ್ಯ)ವಾದ ಯಾವ ಈ ವ್ಯವಹಾರರೂಪವಾದ ಭಾವಗಳಿವೆ ಅವೆಲ್ಲವೂ ಚೇತಕಸ್ವರೂಪದ ವ್ಯಾಪಕನ ವ್ಯಾಪ್ಯವಿರುವುದಿಲ್ಲವಾದ್ದರಿಂದ ನನ್ನಿಂದ ಅತ್ಯಂತ ಭಿನ್ನವಾಗಿವೆ. ಅದಕ್ಕಾಗಿ ನಾನೇ, ನನ್ನಿಂದಲೇ, ನನಗೋಸ್ಕರವೇ, ನನ್ನೊಳಗಿಂದಲೇ, ನನ್ನಲ್ಲಿಯೇ, ನನ್ನನ್ನು ಗ್ರಹಣೆ ಮಾಡುತ್ತೇನೆ. ಆತ್ಮನ ಚೇತನವೇ ಒಂದು ಕ್ರಿಯೆಯಾಗಿರುವುದರಿಂದ 'ನಾನು ಗ್ರಹಣೆ ಮಾಡುತ್ತೇನೆ' ಎಂದರೆ 'ನಾನು ಚೇತಿಸುತ್ತೇನೆ'; ಚೇತಿಸುತ್ತಲೇ

ಯಾವಚೇತಯಿತನವನೆ ನಿಜದಿ ನಾನಿಹೆನೆಂದು ಪ್ರಜ್ಞೆಯಿಂ ಗ್ರಹಿಸುವುದು ।
ಯಾವ ಉಳಿದ ಭಾವಗಳಿವೆ ಅವೆಲ್ಲವನು ತನ್ನಿಂದ ಪರವೆಂದರಿವುದು ॥೨೯೭॥

(ಶಾರ್ದೂಲವಿಕ್ರೀಡಿತಂ)

ಭಿತ್ವಾ ಸರ್ವಮಪಿ ಸ್ವಲಕ್ಷಣಬಲಾದ್ಭೇತ್ತುಂ ಹಿ ಯಚ್ಛಕ್ಯತೇ
ಚಿನ್ಮುದ್ರಾಂಕಿತನಿರ್ವಿಭಾಗಮಹಿಮಾ ಶುದ್ಧಶ್ಚಿದೇವಾಸ್ಮ್ಯಹಮ್ ।
ಭಿದ್ಯಂತೇ ಯದಿ ಕಾರಕಾಣಿ ಯದಿ ವಾ ಧರ್ಮಾ ಗುಣಾ ವಾ ಯದಿ
ಭಿದ್ಯಂತಾಂ ನ ಭಿದಾಸ್ತಿ ಕಾಚನ ವಿಭೌ ಭಾವೇ ವಿಶುದ್ಧೇ ಚಿತಿ ||೧೮೨||

ಚೇತಿಸುತ್ತೇನೆ. ಚೇತಿಸುತ್ತಿರುವವನ ಮುಖಾಂತರವೇ ಚೇತಿಸುತ್ತೇನೆ, ಚೇತಿಸುತ್ತಿರುವವನ ಸಲುವಾಗಿಯೇ ಚೇತಿಸುತ್ತೇನೆ, ಚೇತಿಸುತ್ತಿರುವವನಿಂದಲೇ ಚೇತಿಸುತ್ತೇನೆ, ಚೇತಿಸುವವನಲ್ಲಿಯೇ ಚೇತಿಸುತ್ತೇನೆ, ಚೇತಿಸುವವನನ್ನೇ ಚೇತಿಸುತ್ತೇನೆ. ಅಥವಾ ನಾನು ಚೇತಿಸುವುದಿಲ್ಲ, ಚೇತಿಸದಿರುವವನಿಂದಲೇ ಚೇತಿಸುತ್ತೇನೆ, ಚೇತಿಸದಿರುವವನ ಮುಖಾಂತರ ಚೇತಿಸುತ್ತೇನೆ, ಚೇತಿಸದಿರುವವನ ಸಲುವಾಗಿ ಚೇತಿಸುತ್ತೇನೆ, ಚೇತಿಸದಿರುವವನಿಂದ ಚೇತಿಸುತ್ತೇನೆ, ಚೇತಿಸದಿರುವವನಲ್ಲಿ ಚೇತಿಸುತ್ತೇನೆ, ಚೇತಿಸದಿರುವವನನ್ನು ಚೇತಿಸುತ್ತೇನೆ; ಆದರೆ ನಾನು ಸರ್ವವಿಶುದ್ಧಚಿನ್ಮಾತ್ರ (ಚೈತನ್ಯಮಾತ್ರ)ವಾದ ಭಾವನಾಗಿದ್ದೇನೆ.

ಭಾವಾರ್ಥ :- ಪ್ರಜ್ಞೆಯ ಮುಖಾಂತರ ಬೇರೆ ಮಾಡಲಾದ ಆ ಚೇತಕನು ನಾನಾಗಿದ್ದೇನೆ ಮತ್ತು ಉಳಿದ ಭಾವಗಳು ನನ್ನಿಂದ ಭಿನ್ನವಾಗಿವೆ; ಅದಕ್ಕಾಗಿ (ಅಭಿನ್ನವಾದ ಆರು ಕಾರಕಗಳಿಂದ) ನಾನೇ, ನನ್ನ ಮುಖಾಂತರವೇ, ನನ್ನ ಸಲುವಾಗಿಯೇ, ನನ್ನಿಂದಲೇ, ನನ್ನಲ್ಲಿಯೇ, ನನ್ನನ್ನು ಗ್ರಹಣೆ ಮಾಡುತ್ತೇನೆ. 'ಗ್ರಹಣೆ ಮಾಡುತ್ತೇನೆ' ಎಂದರೆ 'ಚೇತಿಸುತ್ತೇನೆ', ಏಕೆಂದರೆ ಚೇತನವೇ ಆತ್ಮನ ಒಂದು ಕ್ರಿಯೆಯಾಗಿದೆ. ಅದಕ್ಕಾಗಿ ನಾನು ಚೇತಿಸುತ್ತೇನೆಯೇ, ಚೇತಿಸುವವನೇ, ಚೇತಿಸುವವನ ಮುಖಾಂತರವೇ, ಚೇತಿಸುವವನ ಸಲುವಾಗಿಯೇ, ಚೇತಿಸುವವನಿಂದಲೇ, ಚೇತಿಸುವವನಲ್ಲಿಯೇ, ಚೇತಿಸುವವನನ್ನೇ ಚೇತಿಸುತ್ತೇನೆ. ಅಥವಾ ದ್ರವ್ಯದೃಷ್ಟಿಯಿಂದಂತೂ —ನನ್ನಲ್ಲಿ ಆರು ಕಾರಕಗಳ ಭೇದವೂ ಇಲ್ಲ, ನಾನಂತೂ ಶುದ್ಧಚೈತನ್ಯಮಾತ್ರನಾದ ಭಾವವಾಗಿದ್ದೇನೆ—ಹೀಗೆ ಪ್ರಜ್ಞೆಯಿಂದ ಆತ್ಮನನ್ನು ಗ್ರಹಣೆ ಮಾಡಬೇಕು ಎಂದರೆ ತನ್ನನ್ನು ಚೇತಯಿತನರೂಪದಲ್ಲಿ ಅನುಭವ ಮಾಡಬೇಕು.

ಈಗ ಇದೇ ಅರ್ಥದ ಕಲಶರೂಪದ ಕಾವ್ಯವನ್ನು ಹೇಳುತ್ತಾರೆ,—

ಶ್ಲೋಕಾರ್ಥ :- [ಯತ್ ಭೇತ್ತುಂ ಹಿ ಶಕ್ಯತೇ ಸರ್ವಂ ಅಪಿ ಸ್ವಲಕ್ಷಣಬಲಾತ್ ಭಿತ್ವಾ] ಯಾವ ಯಾವುದು ಭೇದಿಸಲಾಗುತ್ತದೆ ಅದೆಲ್ಲವನ್ನೂ ಸ್ವಲಕ್ಷಣಬಲದಿಂದ ಭೇದಿಸಿ, [ಚಿನ್ಮುದ್ರಾ-ಅಂಕಿತ-ನಿರ್ವಿಭಾಗ-ಮಹಿಮಾ ಶುದ್ಧಃ ಚಿದ್ ಏವ ಅಹಂ ಅಸ್ಮಿ] ಯಾವುದರ ಚಿನ್ಮುದ್ರೆಯಿಂದ ಗುರುತುಹಾಕಿದ ನಿರ್ವಿಭಾಗ ಮಹಿಮೆಯಿಂದ (ಎಂದರೆ ಚೈತನ್ಯದ ಮುದ್ರೆಯಿಂದ ಗುರುತಿಸಿದ ವಿಭಾಗರಹಿತವಾದ ಯಾವುದರ ಮಹಿಮೆಯಿದೆ) ಅಂಥ ಶುದ್ಧಚೈತನ್ಯವೇ ನಾನಿದ್ದೇನೆ. [ಯದಿ ಕಾರಕಾಣಿ ವಾ ಯದಿ ಧರ್ಮಾಃ ವಾ ಯದಿ ಗುಣಾಃ ಭಿದ್ಯಂತೇ, ಭಿದ್ಯಂತಾಂ] ಒಂದುವೇಳೆ ಕಾರಕಗಳ, ಅಥವಾ ಧರ್ಮಗಳ, ಇಲ್ಲವೆ ಗುಣಗಳ ಭೇದವಾದರೆ ಬೇಕಾದರಾಗಲಿ; [ವಿಭೌ ವಿಶುದ್ಧೇ ಚಿತಿ ಭಾವೇ ಕಾಚನ ಭಿದಾ ನ ಅಸ್ತಿ] ಆದರೆ ಶುದ್ಧ (—ಎಲ್ಲ ವಿಭಾವಗಳಿಂದ ರಹಿತ—) ವಿಭುವು* ಈ ಪ್ರಕಾರದ ಚೈತನ್ಯಭಾವದಲ್ಲಂತೂ ಯಾವ ಭೇದವಿಲ್ಲ (ಹೀಗೆ ಪ್ರಜ್ಞೆಯಿಂದ ಆತ್ಮನನ್ನು ಗ್ರಹಣೆ ಮಾಡಲಾಗುತ್ತದೆ).

* ವಿಭು = ದೃಢ ಅಚಲ; ನಿತ್ಯ; ಸಮರ್ಥ; ಎಲ್ಲ ಗುಣ-ಪರ್ಯಾಯಗಳಲ್ಲಿ ವ್ಯಾಪಕ.

ಪಣ್ಣಾಏ ಘಿತ್ತವ್ವೋ ಜೋ ದಟ್ಠಾ ಸೋ ಅಹಂ ತು ಣಿಚ್ಛಯದೋ ।
ಅವಸೇಸಾ ಜೇ ಭಾವಾ ತೇ ಮಜ್ಝ ಪರೇ ತ್ತಿ ಣಾದವ್ವಾ ॥೨೯೮॥

ಪಣ್ಣಾಏ ಘಿತ್ತವ್ವೋ ಜೋ ಣಾದಾ ಸೋ ಅಹಂ ತು ಣಿಚ್ಛಯದೋ ।
ಅವಸೇಸಾ ಜೇ ಭಾವಾ ತೇ ಮಜ್ಝ ಪರೇ ತ್ತಿ ಣಾದವ್ವಾ ॥೨೯೯॥

ಪ್ರಜ್ಞಯಾ ಗೃಹೀತವ್ಯೋ ಯೋ ದ್ರಷ್ಟಾ ಸೋಽಹಂ ತು ನಿಶ್ಚಯತಃ ।
ಅವಶೇಷಾ ಯೇ ಭಾವಾಃ ತೇ ಮಮ ಪರಾ ಇತಿ ಜ್ಞಾತವ್ಯಾಃ ॥೨೯೮॥

ಪ್ರಜ್ಞಯಾ ಗೃಹೀತವ್ಯೋ ಯೋ ಜ್ಞಾತಾ ಸೋಽಹಂ ತು ನಿಶ್ಚಯತಃ ।
ಅವಶೇಷಾ ಯೇ ಭಾವಾಃ ತೇ ಮಮ ಪರಾ ಇತಿ ಜ್ಞಾತವ್ಯಾಃ ॥೨೯೯॥

ಭಾವಾರ್ಥ :- ಯಾವವುಗಳ ಸ್ವಲಕ್ಷಣವು ಚೈತನ್ಯವಾಗಿಲ್ಲ ಅಂಥ ಪರಭಾವಗಳಂತೂ ನನ್ನಿಂದ ಬೇರೆಯಾಗಿವೆ, ನಾನಂತೂ ಕೇವಲ ಶುದ್ಧಚೈತನ್ಯವೇ ಇದ್ದೇನೆ. ಕರ್ತಾ, ಕರ್ಮ, ಕರಣ, ಸಂಪ್ರದಾನ, ಅಪಾದಾನ ಮತ್ತು ಅಧಿಕರಣರೂಪವಾದ ಕಾರಕಭೇದಗಳು, ಸತ್ವ, ಅಸತ್ವ, ನಿತ್ಯತ್ವ, ಅನಿತ್ಯತ್ವ, ಏಕತ್ವ, ಅನೇಕತ್ವ ಮೊದಲಾದ ಧರ್ಮಭೇದಗಳು ಮತ್ತು ಜ್ಞಾನ, ದರ್ಶನ, ಮೊದಲಾದ ಗುಣಭೇದಗಳು ಒಂದುವೇಳೆ ಕಥಂಚಿತ್ ಆದರೂ ಬೇಕಾದರೆ ಆಗಲಿ; ಆದರೆ ಶುದ್ಧಚೈತನ್ಯಮಾತ್ರವಾದ ಭಾವದಲ್ಲಂತೂ ಯಾವ ಭೇದವಿಲ್ಲ.–ಹೀಗೆ ಶುದ್ಧನಯದಿಂದ ಅಭೇದರೂಪವಾದ ಆತ್ಮನನ್ನು ಗ್ರಹಣೆ ಮಾಡಬೇಕು ॥೧೮೭॥

(ಆತ್ಮನನ್ನು ಶುದ್ಧಚೈತನ್ಯಮಾತ್ರವಾಗಿಯಂತೂ ಗ್ರಹಣೆ ಮಾಡಿಸಲಾಯಿತು; ಈಗ ಸಾಮಾನ್ಯ ಚೇತನವು ದರ್ಶನಜ್ಞಾನ ಸಾಮಾನ್ಯಮಯವಿರುವುದರಿಂದ ಅನುಭವದಲ್ಲಿ ದರ್ಶನಜ್ಞಾನಸ್ವರೂಪನಾದ ಆತ್ಮನನ್ನು ಹೇಗೆ ಅನುಭವ ಮಾಡಬೇಕು ಅದನ್ನು ಹೇಳುತ್ತಾರೆ,–)

ಗಾಥೆ - ೨೯೮-೨೯೯

ಗಾಥಾರ್ಥ :- [ಪಣ್ಣಾಏ] ಪ್ರಜ್ಞೆಯಿಂದ [ಘಿತ್ತವ್ವೋ] ಹೀಗೆ ಗ್ರಹಣೆ ಮಾಡಬೇಕು - [ಜೋ ದಟ್ಠಾ] ಯಾವ ನೋಡುವಂಥವನಿದ್ದಾನೆ [ಸೋ ತು] ಅವನು [ಣಿಚ್ಛಯದೋ] ನಿಶ್ಚಯದಿಂದ [ಅಹಂ] ನಾನೇ ಇದ್ದೇನೆ, [ಅವಸೇಸಾ] ಉಳಿದ [ಜೇ ಭಾವಾ] ಯಾವ ಭಾವಗಳಿವೆ [ತೇ] ಅವು [ಮಜ್ಝ ಪರೇ] ನನ್ನಿಂದ ಬೇರೆಯಾಗಿವೆ [ತ್ತಿ ಣಾದವ್ವಾ] ಎಂದು ತಿಳಿದುಕೊಳ್ಳಬೇಕು.

ಯಾವನೋಡುವವನವನೆ ನಿಜದಿ ನಾನಿಹೆನೆಂದು ಪ್ರಜ್ಞೆಯಿಂ ಗ್ರಹಿಸುವುದು ।
ಯಾವ ಉಳಿದ ಭಾವಗಳಿವೆ ಅವೆಲ್ಲವನು ತನ್ನಿಂದ ಪರವೆಂದರಿವುದು ॥೨೯೮॥

ಯಾವ ಜ್ಞಾಯಕನವನೆ ನಿಜದಿನಾನಿಹೆನೆಂದು ಪ್ರಜ್ಞೆಯಿಂ ಗ್ರಹಿಸುವುದು ।
ಯಾವ ಉಳಿದ ಭಾವಗಳಿವೆ ಅವೆಲ್ಲವನು ತನ್ನಿಂದ ಪರವೆಂದರಿವುದು ॥೨೯೯॥

ಚೇತನಾಯಾ ದರ್ಶನಜ್ಞಾನವಿಕಲ್ಪಾನತಿಕ್ರಮಣಾಚ್ಚೇತಯಿತೃತ್ವಮಿವ ದ್ರಷ್ಟೃತ್ವಂ ಜ್ಞಾತೃತ್ವಂ ಚಾತ್ಮನಃ ಸ್ವಲಕ್ಷಣಮೇವ। ತತೋऽಹಂ ದ್ರಷ್ಟಾರಮಾತ್ಮಾನಂ ಗೃಹ್ಣಾಮಿ। ಯತ್ಕಿಲ ಗೃಹ್ಣಾಮಿ ತತ್ಪಶ್ಯಾಮ್ಯೇವ; ಪಶ್ಯನ್ನೇವ ಪಶ್ಯಾಮಿ, ಪಶ್ಯತೈವ ಪಶ್ಯಾಮಿ, ಪಶ್ಯತೇ ಏವ ಪಶ್ಯಾಮಿ, ಪಶ್ಯತ ಏವ ಪಶ್ಯಾಮಿ, ಪಶ್ಯತ್ಯೇವ ಪಶ್ಯಾಮಿ, ಪಶ್ಯಂತಮೇವ ಪಶ್ಯಾಮಿ । ಅಥವಾ—ನ ಪಶ್ಯಾಮಿ; ನ ಪಶ್ಯನ್ ಪಶ್ಯಾಮಿ, ನ ಪಶ್ಯತಾ ಪಶ್ಯಾಮಿ, ನ ಪಶ್ಯತೇ ಪಶ್ಯಾಮಿ, ನ ಪಶ್ಯತಃ ಪಶ್ಯಾಮಿ, ನ ಪಶ್ಯತಿ ಪಶ್ಯಾಮಿ, ನ ಪಶ್ಯಂತಂ ಪಶ್ಯಾಮಿ; ಕಿಂತು ಸರ್ವವಿಶುದ್ಧೋ ದೃಙ್ಮಾತ್ರೋ ಭಾವೋऽಸ್ಮಿ । ಅಪಿ ಚ—ಜ್ಞಾತಾರಮಾತ್ಮಾನಂ ಗೃಹ್ಣಾಮಿ । ಯತ್ಕಿಲ ಗೃಹ್ಣಾಮಿ ತಜ್ಜಾನಾಮ್ಯೇವ; ಜಾನನ್ನೇವ ಜಾನಾಮಿ, ಜಾನತೈವ ಜಾನಾಮಿ, ಜಾನತೇ ಏವ ಜಾನಾಮಿ, ಜಾನತ ಏವ ಜಾನಾಮಿ, ಜಾನತ್ಯೇವ ಜಾನಾಮಿ, ಜಾನಂತಮೇವ ಜಾನಾಮಿ। ಅಥವಾ—ನ ಜಾನಾಮಿ; ನ ಜಾನನ್ ಜಾನಾಮಿ, ನ ಜಾನತಾ ಜಾನಾಮಿ, ನ ಜಾನತೇ ಜಾನಾಮಿ, ನ ಜಾನತೋ ಜಾನಾಮಿ, ನ ಜಾನತಿ ಜಾನಾಮಿ, ನ ಜಾನಂತಂ ಜಾನಾಮಿ; ಕಿಂತು ಸರ್ವವಿಶುದ್ಧೋ ಜ್ಞಪ್ತಿಮಾತ್ರೋ ಭಾವೋऽಸ್ಮಿ ।

[ಪಣ್ಣಾಏ] ಪ್ರಜ್ಞೆಯಿಂದ [ಘಿತ್ತವ್ವೋ] ಹೀಗೆ ಗ್ರಹಣ ಮಾಡಬೇಕು - [ಜೋ ಣಾದಾ] ಯಾವ ತಿಳಿಯುವವನಿದ್ದಾನೆ [ಸೋ ತು] ಅವನು [ಣಿಚ್ಛಯದೋ] ನಿಶ್ಚಯದಿಂದ [ಅಹಂ] ನಾನೇ ಇದ್ದೇನೆ, [ಅವಸೇಸಾ] ಉಳಿದ [ಜೇ ಭಾವಾ] ಯಾವ ಭಾವಗಳಿವೆ [ತೇ] ಅವು [ಮಜ್ಝ ಪರೇ] ನನ್ನಿಂದ ಬೇರೆಯಾಗಿವೆ [ತ್ತಿ ಣಾದವ್ವಾ] ಎಂದು ತಿಳಿದುಕೊಳ್ಳಬೇಕು.

ಟೀಕೆ :- ಚೇತನವು ದರ್ಶನಜ್ಞಾನರೂಪವಾದ ಭೇದಗಳ ಉಲ್ಲಂಘನೆಮಾಡುವುದಿಲ್ಲವಾದ್ದರಿಂದ ಚೇತಕತ್ವದಂತೆ ದರ್ಶಕತ್ವ ಮತ್ತು ಜ್ಞಾತೃತ್ವವೂ ಆತ್ಮನ ಸ್ವಲಕ್ಷಣವೇ ಆಗಿದೆ. ಅದಕ್ಕಾಗಿ ನಾನು ನೋಡುವಂಥ ಆತ್ಮನನ್ನು ಗ್ರಹಣ ಮಾಡುತ್ತೇನೆ. 'ಗ್ರಹಣ ಮಾಡುತ್ತೇನೆ' ಎಂದರೆ 'ನೋಡುತ್ತೇನೆಯೇ'; ನೋಡುತ್ತಲೇ ನೋಡುತ್ತೇನೆ, ನೋಡುವವನಿಂದಲೇ ನೋಡುತ್ತೇನೆ, ನೋಡುವವನ ಮುಖಾಂತರವೇ ನೋಡುತ್ತೇನೆ, ನೋಡುವವನಿಗೋಸ್ಕರವೇ ನೋಡುತ್ತೇನೆ, ನೋಡುವವನಿಂದಲೇ ನೋಡುತ್ತೇನೆ, ನೋಡುವವನಲ್ಲಿಯೇ ನೋಡುತ್ತೇನೆ, ನೋಡುತ್ತಿರುವವನನ್ನೇ ನೋಡುತ್ತೇನೆ. ಅಥವಾ ನೋಡುವುದಿಲ್ಲ; ನೋಡದಿರುವವನನ್ನು ನೋಡುತ್ತೇನೆ, ನೋಡದಿರುವವನ ಮುಖಾಂತರ ನೋಡುತ್ತೇನೆ ನೋಡದಿರುವವನಿಗೋಸ್ಕರ ನೋಡುತ್ತೇನೆ, ನೋಡದಿರುವವನಿಂದ ನೋಡುತ್ತೇನೆ, ನೋಡದಿರುವವನಲ್ಲಿ ನೋಡುತ್ತೇನೆ, ನೋಡದಿರುವವನನ್ನು ನೋಡುತ್ತೇನೆ; ಆದರೆ ನಾನು ಸರ್ವವಿಶುದ್ಧದರ್ಶನಮಾತ್ರವಾದ ಭಾವಸ್ವರೂಪನಾಗಿದ್ದೇನೆ. ಮತ್ತು ಇದೇ ಪ್ರಕಾರ—ನಾನು ತಿಳಿದುಕೊಳ್ಳುವಂಥ ಆತ್ಮನನ್ನು ಗ್ರಹಣ ಮಾಡುತ್ತೇನೆ. 'ಗ್ರಹಣ ಮಾಡುತ್ತೇನೆ' ಎಂದರೆ 'ತಿಳಿಯುತ್ತೇನೆಯೇ'; ತಿಳಿದುಕೊಳ್ಳುತ್ತಲೇ ತಿಳಿದುಕೊಳ್ಳುತ್ತೇನೆ, ತಿಳಿದುಕೊಳ್ಳುವವನ ಮುಖಾಂತರವೇ ತಿಳಿದುಕೊಳ್ಳುತ್ತೇನೆ, ತಿಳಿದುಕೊಳ್ಳುವವನಿಗೋಸ್ಕರವೇ ತಿಳಿದುಕೊಳ್ಳುತ್ತೇನೆ, ತಿಳಿದುಕೊಳ್ಳುವವನಿಂದಲೇ ತಿಳಿದುಕೊಳ್ಳುತ್ತೇನೆ ತಿಳಿದುಕೊಳ್ಳುವವನಲ್ಲಿಯೇ ತಿಳಿದುಕೊಳ್ಳುತ್ತೇನೆ, ತಿಳಿದುಕೊಳ್ಳುವವನನ್ನೇ ತಿಳಿದುಕೊಳ್ಳುತ್ತೇನೆ. ಅಥವಾ ತಿಳಿದುಕೊಳ್ಳುವುದಿಲ್ಲ; ತಿಳಿದುಕೊಳ್ಳದವನನ್ನು ತಿಳಿದುಕೊಳ್ಳುತ್ತೇನೆ, ತಿಳಿದುಕೊಳ್ಳದವನ ಮುಖಾಂತರ ತಿಳಿದುಕೊಳ್ಳುತ್ತೇನೆ, ತಿಳಿದುಕೊಳ್ಳದವನಿಗೋಸ್ಕರ ತಿಳಿದುಕೊಳ್ಳುತ್ತೇನೆ, ತಿಳಿದುಕೊಳ್ಳದವನಿಂದ ತಿಳಿದುಕೊಳ್ಳುತ್ತೇನೆ, ತಿಳಿದುಕೊಳ್ಳದವನಲ್ಲಿ ತಿಳಿದುಕೊಳ್ಳುತ್ತೇನೆ, ತಿಳಿದುಕೊಳ್ಳದವನನ್ನು ತಿಳಿದುಕೊಳ್ಳುತ್ತೇನೆ; ಆದರೆ ನಾನು ಸರ್ವವಿಶುದ್ಧವಾದ ಜ್ಞಪ್ತಿ (ತಿಳಿಯುವ ಕ್ರಿಯೆಯರೂಪ) ಮಾತ್ರವಾದ ಭಾವನಾಗಿದ್ದೇನೆ. (ಈ ಪ್ರಕಾರವಾಗಿ ನೋಡುವಂಥ ಆತ್ಮನನ್ನು ಹಾಗೂ ತಿಳಿದುಕೊಳ್ಳುವಂಥ ಆತ್ಮನನ್ನು ಕರ್ತಾ, ಕರ್ಮ, ಕರಣ, ಸಂಪ್ರದಾನ,

ನನು ಕಥಂ ಚೇತನಾ ದರ್ಶನಜ್ಞಾನವಿಕಲ್ಪೌ ನಾತಿಕ್ರಾಮತಿ ಯೇನ ಚೇತಯಿತಾ ದ್ರಷ್ಟಾ ಜ್ಞಾತಾ ಚ ಸ್ಯಾತ್ ? ಉಚ್ಯತೇ—ಚೇತನಾ ತಾವತ್ಪ್ರತಿಭಾಸರೂಪಾ; ಸಾ ತು, ಸರ್ವೇಷಾಮೇವ ವಸ್ತೂನಾಂ ಸಾಮಾನ್ಯವಿಶೇಷಾತ್ಮಕತ್ವಾತ್, ದ್ವೈರೂಪ್ಯಂ ನಾತಿಕ್ರಾಮತಿ। ಯೇ ತು ತಸ್ಯಾ ದ್ವೇ ರೂಪೇ ತೇ ದರ್ಶನಜ್ಞಾನೇ । ತತಃ ಸಾ ತೇ ನಾತಿಕ್ರಾಮತಿ । ಯದ್ಯತಿಕ್ರಾಮತಿ, ಸಾಮಾನ್ಯವಿಶೇಷಾತಿಕ್ರಾಂತತ್ವಾಚ್ಚೇತನೈವ ನ ಭವತಿ । ತದಭಾವೇ ದ್ವೌ ದೋಷೌ-ಸ್ವಗುಣೋಚ್ಛೇದಾಚ್ಚೇತನಸ್ಯಾಚೇತನತಾಪತ್ತಿಃ, ವ್ಯಾಪಕಾಭಾವೇ ವ್ಯಾಪ್ಯಸ್ಯ ಚೇತನಸ್ಯಾಭಾವೋ ವಾ । ತತಸ್ತದ್ದೋಷಭಯಾದ್ದರ್ಶನಜ್ಞಾನಾತ್ಮಿಕೈವ ಚೇತನಾಭ್ಯುಪಗಂತವ್ಯಾ ।

ಅಪಾದಾನ ಮತ್ತು ಅಧಿಕರಣರೂಪವಾದ ಕಾರಕಗಳ ಭೇದಪೂರ್ವಕವಾಗಿ ಗ್ರಹಣಮಾಡಿ, ಅನಂತರ ಕಾರಕಭೇದಗಳನ್ನು ನಿಷೇಧಿಸಿ ಆತ್ಮನನ್ನು ಎಂದರೆ ತನ್ನನ್ನು ದರ್ಶನಮಾತ್ರಭಾವರೂಪವಾಗಿ ಹಾಗೂ ಜ್ಞಾನಮಾತ್ರಭಾವರೂಪವಾಗಿ ಅನುಭವಿಸಬೇಕು ಎಂದರೆ ಅಭೇದರೂಪದಿಂದ ಅನುಭವ ಪಡೆಯಬೇಕು.)

ಭಾವಾರ್ಥ :- (ಈ ಮೂರು ಗಾಥೆಗಳಲ್ಲಿ ಪ್ರಜ್ಞೆಯ ಮುಖಾಂತರ ಆತ್ಮನನ್ನು ಗ್ರಹಣ ಮಾಡುವುದಕ್ಕೆ ಹೇಳಲಾಗಿದೆ. 'ಗ್ರಹಣಮಾಡುವುದು' ಎಂದರೆ ಯಾವುದೇ ಇತರ ವಸ್ತುವನ್ನು ಗ್ರಹಣಮಾಡುವುದು ಅಥವಾ ತೆಗೆದುಕೊಳ್ಳುವುದಲ್ಲ; ಆದರೆ ಚೇತನದ ಅನುಭವ ಪಡೆಯುವುದೇ ಆತ್ಮನನ್ನು 'ಗ್ರಹಣಮಾಡುವುದಿದೆ.'

ಮೊದಲನೆಯ ಗಾಥೆಯಲ್ಲಿ ಸಾಮಾನ್ಯ ಚೇತನಾದ ಅನುಭವ ಮಾಡಿಸಲಾಗಿದೆ. ಅಲ್ಲಿ ಅನುಭವ ಪಡೆಯುವಂಥವನು, ಯಾವನ ಅನುಭವವನ್ನು ಪಡೆಯಲಾಗುತ್ತದೆ ಅವನು ಮತ್ತು ಯಾವನ ಮುಖಾಂತರ ಅನುಭವ ಪಡೆಯಲಾಗುತ್ತದೆ ಅವನು—ಇವೇ ಮೊದಲಾದ ಕಾರಕಗಳ ಭೇದದಿಂದ ಆತ್ಮನನ್ನು ಹೇಳಿ, ಅಭೇದ ವಿವಕ್ಷೆಯಿಂದ ಕಾರಕಭೇದಗಳ ನಿಷೇಧಮಾಡಿ, ಆತ್ಮನನ್ನು ಒಂದು ಶುದ್ಧಚೈತನ್ಯಮಾತ್ರವಾಗಿ ಹೇಳಲಾಗಿದ.

ಇನ್ನು ಈ ಎರಡು ಗಾಥೆಗಳಲ್ಲಿ ದೃಷ್ಟಾ ಹಾಗೂ ಜ್ಞಾತಾನ ಅನುಭವ ಮಾಡಿಸಲಾಗಿದೆ, ಏಕೆಂದರೆ ಚೇತನಾ ಸಾಮಾನ್ಯವು ದರ್ಶನಜ್ಞಾನ ವಿಶೇಷಗಳ ಉಲ್ಲಂಘನೆ ಮಾಡುವುದಿಲ್ಲ. ಇಲ್ಲಿಯೂ ಆರು ಕಾರಕರೂಪವಾದ ಭೇದಗಳ ಅನುಭವ ಮಾಡಿಸಿ, ಅನಂತರ ಅಭೇದ-ಅನುಭವದ ಅಪೇಕ್ಷೆಯಿಂದ ಕಾರಕಭೇದಗಳನ್ನು ದೂರಮಾಡಿ ಕೇವಲ ದೃಷ್ಟಾ-ಜ್ಞಾತಾಗಳ ಅನುಭವ ಮಾಡಿಸಲಾಗಿದೆ.)

(*ಟೀಕೆ) :- ಯಾವುದರಿಂದ ಆತ್ಮನು ದೃಷ್ಟಾ ಹಾಗೂ ಜ್ಞಾತಾ ಆಗುತ್ತಾನೆ ಅಂಥ ಚೇತನವು ಜ್ಞಾನ ದರ್ಶನಭೇದಗಳ ಉಲ್ಲಂಘನೆಯನ್ನೇಕೆ ಮಾಡುವುದಿಲ್ಲ?—ಎಂಬ ಪ್ರಶ್ನೆಯು ಇಲ್ಲಿ ಉಪಸ್ಥಿತವಾಗುತ್ತದೆ. ಇದರ ಉತ್ತರವನ್ನು ಆಚಾರ್ಯದೇವರು ಹೀಗೆ ಕೊಡುತ್ತಾರೆ—ಮೊದಲಂತೂ ಚೇತನಾವು ಪ್ರತಿಭಾಸರೂಪವಾಗಿದೆ. ಆ ಚೇತನಾವು ಉಭಯರೂಪತೆಯ ಉಲ್ಲಂಘನೆ ಮಾಡುವುದಿಲ್ಲ, ಏಕೆಂದರೆ ಎಲ್ಲ ವಸ್ತುಗಳು ಸಾಮಾನ್ಯ ವಿಶೇಷಾತ್ಮಕವಾಗಿವೆ. (ಸಮಸ್ತ ವಸ್ತುಗಳು ಸಾಮಾನ್ಯ-ವಿಶೇಷಸ್ವರೂಪವಾಗಿವೆ, ಆದಕ್ಕಾಗಿ ಅವನ್ನು ಪ್ರತಿಭಾಸಿಸುವಂಥ ಚೇತನಾವೂ ಉಭಯರೂಪತೆಯ ಉಲ್ಲಂಘನೆ ಮಾಡುವುದಿಲ್ಲ.) ಆದರ ಯಾವ ಎರಡು ರೂಪಗಳಿವೆ ಅವು ದರ್ಶನ ಮತ್ತು ಜ್ಞಾನಗಳಾಗಿವೆ. ಆದಕ್ಕಾಗಿ ಚೇತನಾವು ಅವುಗಳ (ದರ್ಶನಜ್ಞಾನಗಳ) ಉಲ್ಲಂಘನೆ ಮಾಡುವುದಿಲ್ಲ. ಒಂದುವೇಳೆ ಚೇತನಾವು ದರ್ಶನ-ಜ್ಞಾನಗಳ ಉಲ್ಲಂಘನೆ ಮಾಡಿದರೆ ಸಾಮಾನ್ಯ ವಿಶೇಷದ ಉಲ್ಲಂಘನೆ ಮಾಡುವುದರಿಂದ ಚೇತನಾವಾಗಿಯೂ ಉಳಿಯುವುದಿಲ್ಲ (ಎಂದರೆ ಚೇತನಾದ ಅಭಾವವಾಗಿ ಬಿಡುವುದು). ಅದರ ಅಭಾವದಲ್ಲಿ, ೧) ತನ್ನ ಗುಣದ ನಾಶವಾಗುವುದರಿಂದ ಚೇತನಕ್ಕೆ ಅಚೇತನತನವು ಬಂದುಬಿಡುವುದು;

* ಚೇತನ = ಆತ್ಮ; ಚೇತನಾ = ಜ್ಞಾನದರ್ಶನ.

(ಶಾರ್ದೂಲವಿಕ್ರೀಡಿತಂ)

ಅದ್ವೈತಾಪಿ ಹಿ ಚೇತನಾ ಜಗತಿ ಚೇದ್ ದೃಗ್ಜ್ಞಪ್ತಿರೂಪಂ ತ್ಯಜೇತ್
ತತ್ಸಾಮಾನ್ಯವಿಶೇಷರೂಪವಿರಹಾತ್ಸಾಽಸ್ತಿತ್ವಮೇವ ತ್ಯಜೇತ್ ।
ತತ್ತ್ಯಾಗೇ ಜಡತಾ ಚಿತೋಽಪಿ ಭವತಿ ವ್ಯಾಪ್ಯೋ ವಿನಾ ವ್ಯಾಪಕಾ-
ದಾತ್ಮಾ ಚಾಂತಮುಪೈತಿ ತೇನ ನಿಯತಂ ದೃಗ್ಜ್ಞಪ್ತಿರೂಪಾಽಸ್ತು ಚಿತ್ ||೧೮೩||

ಇಲ್ಲವೆ ೨) ವ್ಯಾಪಕ (ಚೇತನಾ)ದ ಅಭಾವದಲ್ಲಿ ವ್ಯಾಪ್ಯವಾದಂಥ ಚೇತನದ (ಆತ್ಮನ) ಅಭಾವವಾಗಿಬಿಡಬಹುದು- ಎಂಬೆರಡು ದೋಷಗಳು ಬರುತ್ತವೆ. ಅದಕ್ಕಾಗಿ ಆ ದೋಷಗಳ ಭಯದಿಂದ ಚೇತನಾವನ್ನು ದರ್ಶನಜ್ಞಾನಗಳ ಸ್ವರೂಪದಿಂದಲೇ ಸ್ವೀಕಾರ ಮಾಡಬೇಕಾಗುವುದು.

ಈಗ ಇದೇ ಅರ್ಥದ ಕಲಶರೂಪವಾದ ಕಾವ್ಯವನ್ನು ಹೇಳುತ್ತಾರೆ,-

ಶ್ಲೋಕಾರ್ಥ :- [ಜಗತಿ ಹಿ ಚೇತನಾ ಅದ್ವೈತಾ] ನಿಶ್ಚಯವಾಗಿ ಜಗತ್ತಿನಲ್ಲಿ ಚೇತನಾವು ಅದ್ವೈತವಾಗಿದೆ [ಅಪಿ ಚೇತ್ ಸಾ ದೃಗ್ಜ್ಞಪ್ತಿರೂಪಂ ತ್ಯಜೇತ್] ಆದರೂ ಒಂದುವೇಳೆ ದರ್ಶನ-ಜ್ಞಾನರೂಪಗಳನ್ನು ಬಿಟ್ಟುಕೊಟ್ಟರೆ [ತತ್ಸಾಮಾನ್ಯವಿಶೇಷರೂಪವಿರಹಾತ್] ಸಾಮಾನ್ಯ-ವಿಶೇಷರೂಪದ ಅಭಾವದಿಂದ (ಆ ಚೇತನಾವು) [ಅಸ್ತಿತ್ವಂ ಏವ ತ್ಯಜೇತ್] ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದು; ಮತ್ತು [ತತ್-ತ್ಯಾಗೇ] ಹೀಗೆ ಚೇತನಾವು ತನ್ನ ಅಸ್ತಿತ್ವವನ್ನು ಕಳೆದುಕೊಂಡನಂತರ, ೧) [ಚಿತಃ ಅಪಿ ಜಡತಾ ಭವತಿ] ಚೇತನಕ್ಕೂ ಜಡತ್ವವು ಬಂದುಬಿಡುವುದು -ಎಂದರೆ ಆತ್ಮನು ಜಡವಾಗಿ ಬಿಡುವನು [ಚ] ಮತ್ತು ೨) [ವ್ಯಾಪಕಾತ್ ವಿನಾ ವ್ಯಾಪ್ಯಃ ಆತ್ಮಾ ಅಂತಂ ಉಪೈತಿ] ವ್ಯಾಪಕ (ಚೇತನಾ)ವಿಲ್ಲದೆ ವ್ಯಾಪ್ಯನಾದ ಯಾವ ಆತ್ಮನಿದ್ದಾನೆ ಅವನು ನಷ್ಟವಾಗಿ ಬಿಡಬಹುದು- (ಹೀಗೆ ಎರಡು ದೋಷಗಳು ಬರುತ್ತವೆ). [ತೇನ ಚಿತ್ ನಿಯತಂ ದೃಗ್ಜ್ಞಪ್ತಿರೂಪಾ ಅಸ್ತು] ಆದ್ದರಿಂದ ಚೇತನಾವು ನಿಯಮದಿಂದ ದರ್ಶನಜ್ಞಾನರೂಪವಾಗಿಯೇ ಇರಲಿ.

ಭಾವಾರ್ಥ :- ಎಲ್ಲ ವಸ್ತುಗಳು ಸಾಮಾನ್ಯ-ವಿಶೇಷಾತ್ಮಕವಾಗಿವೆ. ಅದಕ್ಕಾಗಿ ಅವನ್ನು ಪ್ರತಿಭಾಸಿಸುವಂಥ ಚೇತನಾವೂ ಸಾಮಾನ್ಯ ಪ್ರತಿಭಾಸರೂಪ (-ದರ್ಶನರೂಪ) ಮತ್ತು ವಿಶೇಷ ಪ್ರತಿಭಾಸರೂಪ (-ಜ್ಞಾನರೂಪ) ವಾಗಿರಲು ಬೇಕು. ಚೇತನಾವು ಒಂದುವೇಳೆ ತನ್ನ ದರ್ಶನ-ಜ್ಞಾನರೂಪಗಳನ್ನು ಬಿಟ್ಟುಕೊಟ್ಟರೆ ಚೇತನಾದ್ದೂ ಅಭಾವವಾದಮೇಲೆ ಇಲ್ಲದಿದ್ದರೆ ಚೇತನ ಆತ್ಮನಿಗೆ (ತನ್ನ ಚೇತನಾಗುಣದ ಅಭಾವವಾದಮೇಲೆ) ಜಡತ್ವವು ಬಂದುಬಿಡಬಹುದು, ಅಥವಾ ಆ ವ್ಯಾಪಕದ ಅಭಾವದಿಂದ ವ್ಯಾಪ್ಯನಾದಂಥ ಆತ್ಮನ ಅಭಾವವಾಗಿ ಬಿಡಬಹುದು. (ಚೇತನಾವು ಆತ್ಮನ ಎಲ್ಲ ಅವಸ್ಥೆಗಳಲ್ಲಿ ವ್ಯಾಪ್ತವಾಗಿರುವುದರಿಂದ ವ್ಯಾಪಕವಾಗಿದೆ ಮತ್ತು ಆತ್ಮನು ಚೇತನವಾಗಿರುವುದರಿಂದ ಚೇತನಾದ ವ್ಯಾಪ್ಯನಾಗಿದ್ದಾನೆ. ಅದಕ್ಕಾಗಿ ಚೇತನಾದ ಅಭಾವವಾದನಂತರ ಆತ್ಮನದೂ ಅಭಾವವಾಗಬಹುದು.) ಅದಕ್ಕಾಗಿ ಚೇತನಾವನ್ನು ದರ್ಶನಜ್ಞಾನಸ್ವರೂಪವಾಗಿಯೇ ಮನ್ನಿಸಬೇಕಾಗುವುದು.

ಈ ಕಥನದ ಸಾರಾಂಶವೇನೆಂದರೆ-ಸಾಂಖ್ಯಮತವನ್ನವಲಂಬಿಸಿದವರು ಮೊದಲಾಗಿ ಅದೆಷ್ಟೋ ಜನರು ಸಾಮಾನ್ಯ ಚೇತನಾವನ್ನೇ ನಂಬಿ ಏಕಾಂತ ಕಥನವನ್ನು ಮಾಡುತ್ತಾರೆ, ಅವರ ಕಥನದ ನಿಷೇಧಮಾಡುವುದಕ್ಕಾಗಿ ಇಲ್ಲಿ 'ವಸ್ತುವಿನ ಸ್ವರೂಪವು ಸಾಮಾನ್ಯ ವಿಶೇಷರೂಪವಾಗಿರುವುದರಿಂದ ಚೇತನಾವನ್ನು ಸಾಮಾನ್ಯವಿಶೇಷ ರೂಪವಾಗಿ ಸ್ವೀಕರಿಸಬೇಕಾಗುವುದೆ'ಂದು ಇಲ್ಲಿ ತೋರಿಸಿಕೊಟ್ಟಿದ್ದಾರೆ. ||೧೮೩||

(ಇಂದ್ರವಜ್ರ)

ಏಕಶ್ಚಿತಶ್ಚಿನ್ಮಯ ಏವ ಭಾವೋ
ಭಾವಾಃ ಪರೇ ಯೇ ಕಿಲ ತೇ ಪರೇಷಾಮ್ ।
ಗ್ರಾಹ್ಯಸ್ತತಶ್ಚಿನ್ಮಯ ಏವ ಭಾವೋ
ಭಾವಾಃ ಪರೇ ಸರ್ವತ ಏವ ಹೇಯಾಃ ॥೧೮೪॥

ಕೋ ಣಾಮ ಭಣಿಜ್ಜ ಬುಹೋ ಣಾದುಂ ಸವ್ವೇ ಪರಾಇಏ ಭಾವೇ ।
ಮಜ್ಝಮಿಣಂ ತಿ ಯ ವಯಣಂ ಜಾಣಂತೋ ಅಪ್ಪಯಂ ಸುದ್ಧಂ ॥೩೦೦॥

ಕೋ ನಾಮ ಭಣೇದ್ಬುಧಃ ಜ್ಞಾತ್ವಾ ಸರ್ವಾನ್ ಪರಕೀಯಾನ್ ಭಾವಾನ್ ।
ಮಮೇದಮಿತಿ ಚ ವಚನಂ ಜಾನನ್ನಾತ್ಮಾನಂ ಶುದ್ಧಮ್ ॥೩೦೦॥

ಯೋ ಹಿ ಪರಾತ್ಮನೋರ್ನಿಯತಸ್ವಲಕ್ಷಣವಿಭಾಗಪಾತಿನ್ಯಾ ಪ್ರಜ್ಞಯಾ ಜ್ಞಾನೀ ಸ್ಯಾತ್, ಸ ಖಲ್ವೇಕಂ ಚಿನ್ಮಾತ್ರಂ ಭಾವಮಾತ್ಮೀಯಂ ಜಾನಾತಿ, ಶೇಷಾಂಶ್ಚ ಸರ್ವಾನೇವ ಭಾವಾನ್ ಪರಕೀಯಾನ್

ಈಗ ಮುಂದಿನ ಕಥನದ ಸೂಚಕವಾಗಿ ಕಲಶರೂಪದ ಕಾವ್ಯವನ್ನು ಹೇಳುತ್ತಾರೆ,—

ಶ್ಲೋಕಾರ್ಥ :- [ಚಿತಃ] ಚೈತನ್ಯಕ್ಕಂತೂ (ಆತ್ಮನಿಗಂತೂ) [ಏಕಃ ಚಿನ್ಮಯಃ ಏವ ಭಾವಃ] ಒಂದು ಚಿನ್ಮಯವೇ ಭಾವವಾಗಿದೆ, ಮತ್ತು [ಯೇ ಪರೇ ಭಾವಾಃ] ಯಾವ ಅನ್ಯಭಾವಗಳಿವೆ [ತೇ ಕಿಲ ಪರೇಷಾಂ] ಅವು ನಿಜವಾಗಿ ಇತರರ ಭಾವಗಳಿವೆ; [ತತಃ] ಆದಕ್ಕಾಗಿ [ಚಿನ್ಮಯಃ ಭಾವಃ ಏವ ಗ್ರಾಹ್ಯಃ] (ಒಂದು) ಚಿನ್ಮಯಭಾವವೇ ಗ್ರಹಣೆ ಮಾಡಲು ಯೋಗ್ಯವಾಗಿದೆ, [ಪರೇ ಭಾವಾಃ ಸರ್ವತಃ ಏವ ಹೇಯಾಃ] ಇತರ ಭಾವಗಳು ಸರ್ವಥಾ ತ್ಯಾಗಮಾಡುವಂಥವುಗಳಾಗಿವೆ. ॥೧೮೪॥

ಈಗ ಇದೇ ಉಪದೇಶವನ್ನು ಗಾಥಾ ಸೂತ್ರದ ಮುಖಾಂತರ ಹೇಳುತ್ತಾರೆ,—

ಗಾಥೆ - ೩೦೦

ಗಾಥಾರ್ಥ :- [ಸವ್ವೇ ಭಾವೇ] ಎಲ್ಲ ಭಾವಗಳನ್ನು [ಪರಾಇಏ] ಇತರರವೆಂದು [ಣಾದುಂ] ತಿಳಿದುಕೊಂಡು [ಕೋ ಣಾಮ ಬುಹೋ] ಯಾವ ಜ್ಞಾನಿಯು, [ಅಪ್ಪಯಂ] ತನ್ನನ್ನು [ಸುದ್ಧಂ] ಶುದ್ಧವೆಂದು [ಜಾಣಂತೋ] ತಿಳಿದುಕೊಳ್ಳುತ್ತ, [ಮಜ್ಝಮಿಣಂ] 'ಇದು ನನ್ನದಿದೆ' (—'ಈ ಭಾವವು ನನ್ನದಿದೆ') [ತಿ ಯ ವಯಣಂ] ಎಂಬ ಮಾತನ್ನು [ಭಣಿಜ್ಜ] ಹೇಗೆ ಆಡಿಯಾನು ?

ಟೀಕೆ :- ಯಾವ (ಪುರುಷನು) ಪರವಸ್ತುವಿನ ಮತ್ತು ಆತ್ಮನ ನಿಶ್ಚಿತವಾದ ಸ್ವಲಕ್ಷಣಗಳ ವಿಭಾಗದಲ್ಲಿ ಬೀಳುವಂಥ ಪ್ರಜ್ಞೆಯಿಂದ ಜ್ಞಾನಿಯಾಗುತ್ತಾನೆ, ಅವನು ನಿಜವಾಗಿ ಒಂದು ಚಿನ್ಮಾತ್ರವಾದ ಭಾವವನ್ನು ತನ್ನದೆಂದು

ಯಾವೆಲ್ಲ ಭಾವಗಳು ಪರರವೆಂದರಿದಾತ್ಮನನು ಶುದ್ಧವೆದರಿವವನು ।
ಅವನಾವ ಜ್ಞಾನಿ 'ಇದು ನನ್ನದಿದೆ'ಯೆಂಬ ವಚನವನಾಡಬಹುದು ॥೩೦೦॥

ಜಾನಾತಿ । ಏವಂ ಚ ಜಾನನ್ ಕಥಂ ಪರಭಾವಾನ್ಮಮಾಮೀ ಇತಿ ಬ್ರೂಯಾತ್ ? ಪರಾತ್ಮನೋರ್ನಿಶ್ಚಯೇನ ಸ್ವಸ್ವಾಮಿಸಂಬಂಧಸ್ಯಾಸಂಭವಾತ್ । ಅತಃ ಸರ್ವಥಾ ಚಿದ್ಭಾವ ಏವ ಗೃಹೀತವ್ಯಃ, ಶೇಷಾಃ ಸರ್ವೇ ಏವ ಭಾವಾಃ ಪ್ರಹಾತವ್ಯಾ ಇತಿ ಸಿದ್ಧಾಂತಃ ।

(ಶಾರ್ದೂಲವಿಕ್ರೀಡಿತಂ)

ಸಿದ್ಧಾಂತೋಽಯಮುದಾತ್ತಚಿತ್ತಚರಿತ್ರೈರ್ಮೋಕ್ಷಾರ್ಥಿಭಿಃ ಸೇವ್ಯತಾಂ
ಶುದ್ಧಂ ಚಿನ್ಮಯಮೇಕಮೇವ ಪರಮಂ ಜ್ಯೋತಿಃ ಸದೈವಾಸ್ಮ್ಯಹಮ್ ।
ಏತೇ ಯೇ ತು ಸಮುಲ್ಲಸಂತಿ ವಿವಿಧಾ ಭಾವಾಃ ಪೃಥಗ್ಲಕ್ಷಣಾ-
ಸ್ತೇಽಹಂ ನಾಸ್ಮಿ ಯತೋಽತ್ರ ತೇ ಮಮ ಪರದ್ರವ್ಯಂ ಸಮಗ್ರಾ ಅಪಿ ॥೧೮೫॥

ತಿಳಿಯುತ್ತಾನೆ ಮತ್ತು ಉಳಿದ ಎಲ್ಲ ಭಾವಗಳನ್ನು ಇತರರವೆಂದು ತಿಳಿಯುತ್ತಾನೆ. ಹೀಗೆ ತಿಳಿದುಕೊಳ್ಳುವ (ಆ ಪುರುಷನು) ಪರಭಾವಗಳನ್ನು 'ಇವು ನನ್ನವಿವೆ'ಯೆಂದು ಹೇಗೆ ಹೇಳಿಯಾನು? (ಹೇಳಲಾರನು;) ಏಕೆಂದರೆ ಪರವಸ್ತುವಿನಲ್ಲಿ ಮತ್ತು ತನ್ನಲ್ಲಿ ನಿಶ್ಚಿತವಾಗಿ ಸ್ವಸ್ವಾಮಿತ್ವದ ಅಭಾವವಿದೆ. ಆದಕ್ಕಾಗಿ ಸರ್ವಥಾ (ಏಕಮಾತ್ರವಾದ) ಚಿದ್ಭಾವವೇ ಗ್ರಹಣೆ ಮಾಡಲು ಯೋಗ್ಯವಾಗಿದೆ, ಉಳಿದ ಎಲ್ಲ ಭಾವಗಳು ತ್ಯಾಗ ಯೋಗ್ಯವಾಗಿವೆ—ಎಂಬುದಾಗಿ ಸಿದ್ಧಾಂತವಿದೆ.

ಭಾವಾರ್ಥ :- ಯಾವನು ಬುದ್ಧಿಶಾಲಿ ಮತ್ತು ನ್ಯಾಯಸಂಪನ್ನನಿರುತ್ತಾನೆ ಅವನು ಇತರರ ಸಂಪತ್ತನ್ನು ತನ್ನದೆಂದು ಹೇಳುವುದಿಲ್ಲ--ಇದು ಲೋಕದಲ್ಲೂ ನ್ಯಾಯವಾಗಿದೆ. ಇದೇ ಪ್ರಕಾರ ಯಾವನು ಸಮ್ಯಕ್‌ಜ್ಞಾನಿಯಾಗಿದ್ದಾನೆ, ಅವನು ಸಮಸ್ತ ಪರಪದಾರ್ಥಗಳನ್ನು ತನ್ನವೆಂದು ನಂಬುವುದಿಲ್ಲ, ಆದರೆ ತನ್ನ ನಿಜಸ್ವಭಾವವನ್ನೇ ತನ್ನದೆಂದು ತಿಳಿದುಕೊಂಡು ಅದನ್ನೇ ಗ್ರಹಣೆ ಮಾಡುತ್ತಾನೆ.

ಈಗ ಇದೇ ಅರ್ಥದ ಕಲಶರೂಪವಾದ ಕಾವ್ಯವನ್ನು ಹೇಳುತ್ತಾರೆ,—

ಶ್ಲೋಕಾರ್ಥ :- [ಉದಾತ್ತಚಿತ್ತಚರಿತ್ರೈಃ ಮೋಕ್ಷಾರ್ಥಿಭಿಃ] ಯಾರ ಚಿತ್ತದ ಚಾರಿತ್ರವು ಉದಾತ್ತ (ಉದಾರ, ಉಚ್ಚ, ಉಜ್ವಲ)ವಾಗಿದೆ ಅಂಥ ಮೋಕ್ಷಾರ್ಥಿಯು '[ಅಹಂ ಶುದ್ಧಂ ಚಿನ್ಮಯಂ ಏಕಂ ಪರಮಂ ಜ್ಯೋತಿಃ ಏವ ಸದಾ ಏವ ಅಸ್ಮಿ] ನಾನಂತೂ ಯಾವಾಗಲೂ ಶುದ್ಧಚೈತನ್ಯಮಯವಾದ ಒಂದು ಪರಂಜ್ಯೋತಿಯೇ ಆಗಿದ್ದೇನೆ; [ತು] ಮತ್ತು [ಏತೇ ಯೇ ಪೃಥಗ್ಲಕ್ಷಣಾಃ ವಿವಿಧಾಃ ಭಾವಾಃ ಸಮುಲ್ಲಸಂತಿ ತೇ ಅಹಂ ನ ಅಸ್ಮಿ] ಯಾವ ಈ ಭಿನ್ನಲಕ್ಷಣವುಳ್ಳ ವಿವಿಧ ಪ್ರಕಾರದ ಭಾವಗಳು ಪ್ರಕಟವಾಗುತ್ತವೆ ಅವೆಂದರೆ ನಾನಲ್ಲ, [ಯತಃ ಅತ್ರ ತೇ ಸಮಗ್ರಾಃ ಅಪಿ ಮಮ ಪರದ್ರವ್ಯಂ] ಏಕೆಂದರೆ ಅವೆಲ್ಲವೂ ನನ್ನ ಸಲುವಾಗಿ ಪರದ್ರವ್ಯಗಳಾಗಿವೆ'. [ಅಯಂ ಸಿದ್ಧಾಂತಃ] - ಎಂಬ ಈ ಸಿದ್ಧಾಂತದ [ಸೇವ್ಯತಾಂ] ಸೇವನೆ ಮಾಡಬೇಕು. ॥೧೮೫॥

ಈಗ ಮುಂದಿನ ಕಥನದ ಸೂಚಕವಾಗಿ ಕಲಶ ಕಾವ್ಯವನ್ನು ಹೇಳುತ್ತಾರೆ,—

(ಅನುಷ್ಟುಪ್)

ಪರದ್ರವ್ಯಗ್ರಹಂ ಕುರ್ವನ್ ಬಧ್ಯೇತೈವಾಪರಾಧವಾನ್ ।
ಬಧ್ಯೇತಾನಪರಾಧೋ ನ ಸ್ವದ್ರವ್ಯೇ ಸಂವೃತೋ ಯತಿಃ ॥೧೮೬॥

ಥೇಯಾದೀ ಅವರಾಹೇ ಜೋ ಕುವ್ವದಿ ಸೋ ಉ ಸಂಕಿದೋ ಭಮದಿ ।
ಮಾ ಬಜ್ಝೇಜ್ಜಂ ಕೇಣ ವಿ ಚೋರೋ ತ್ತಿ ಜಣಮ್ಹಿ ವಿಯರಂತೋ ॥೩೦೧॥

ಜೋ ಣ ಕುಣದಿ ಅವರಾಹೇ ಸೋ ಣಿಸ್ಸಂಕೋ ದು ಜಣವದೇ ಭಮದಿ ।
ಣ ವಿ ತಸ್ಸ ಬಜ್ಝಿದುಂ ಜೇ ಚಿಂತಾ ಉಪ್ಪಜ್ಜದಿ ಕಯಾಇ ॥೩೦೨॥

ಶ್ಲೋಕಾರ್ಥ :- [ಪರದ್ರವ್ಯಗ್ರಹಂ ಕುರ್ವನ್] ಯಾವನು ಪರದ್ರವ್ಯವನ್ನು ಗ್ರಹಣೆ ಮಾಡುತ್ತಾನೆ [ಅಪರಾಧವಾನ್] ಅವನು ಅಪರಾಧಿಯಾಗಿದ್ದಾನೆ [ಬಧ್ಯೇತ ಏವ] ಅದಕ್ಕಾಗಿ ಬಂಧನದಲ್ಲಿ ಬಿದ್ದೇಬೀಳುತ್ತಾನೆ, [ಸ್ವದ್ರವ್ಯೇ ಸಂವೃತಃ ಯತಿಃ] ಮತ್ತು ಯಾವನು ಸ್ವದ್ರವ್ಯದಲ್ಲಿಯೇ ಸಂವೃತನಿದ್ದಾನೆ (ಎಂದರೆ ಯಾವನು ತನ್ನ ದ್ರವ್ಯದಲ್ಲಿಯೇ ಗುಪ್ತ-ಮಗ್ನನಿದ್ದಾನೆ, ಸಂತುಷ್ಟನಿದ್ದಾನೆ, ಪರದ್ರವ್ಯದ ಸ್ವೀಕಾರ ಮಾಡುವುದಿಲ್ಲ) ಇಂಥ ಮುನಿಯು [ಅನಪರಾಧಃ] ನಿರಪರಾಧಿಯಾಗಿದ್ದಾನೆ [ನ ಬಧ್ಯೇತ] ಅದಕ್ಕಾಗಿ ಬಂಧನಕ್ಕೆ ಒಳಗಾಗುವುದಿಲ್ಲ. ॥೧೮೬॥

ಈಗ ಈ ಕಥನವನ್ನು ದೃಷ್ಟಾಂತದೊಡನೆ ಗಾಥಾಸೂತ್ರಗಳ ಮುಖಾಂತರ ಹೇಳುತ್ತಾರೆ,—

ಗಾಥೆ - ೩೦೧-೩೦೩

ಗಾಥಾರ್ಥ :- [ಜೋ] ಯಾವ ಪುರುಷನು (ಥೇಯಾದೀ ಅವರಾಹೇ] ಕಳವು ಮೊದಲಾದ ಅಪರಾಧಗಳನ್ನು [ಕುವ್ವದಿ] ಮಾಡುತ್ತಾನೆ [ಸೋ ಉ] ಅವನು '[ಜಣಮ್ಹಿ ವಿಯರಂತೋ] ಜಗತ್ತಿನಲ್ಲಿ ತಿರುಗಾಡುತ್ತ [ಕೇಣ ವಿ] ಯಾರೂ ನನ್ನನ್ನು [ಚೋರೋ ತ್ತಿ] ಕಳ್ಳನೆಂದು ತಿಳಿದುಕೊಂಡು [ಮಾ ಬಜ್ಝೇಜ್ಜಂ] ಹಿಡಿದುಕೊಳ್ಳದಿರಲಿ', - ಎಂದು [ಸಂಕಿದೋ ಭಮದಿ] ಸಂಶಯಪಡುತ್ತ ತಿರುಗಾಡುತ್ತಾನೆ; [ಜೋ] ಯಾವ ಪುರುಷನು [ಅವರಾಹೇ] ಅಪರಾಧವನ್ನು [ಣ ಕುಣದಿ] ಮಾಡುವುದಿಲ್ಲ [ಸೋ ದು] ಅವನು [ಜಣವದೇ] ಜಗತ್ತಿನಲ್ಲಿ [ಣಿಸ್ಸಂಕೋ ಭಮದಿ] ನಿಶ್ಶಂಕನಾಗಿ ತಿರುಗಾಡುತ್ತಾನೆ, [ಜೇ] ಏಕೆಂದರೆ [ತಸ್ಸ] ಅವನಿಗೆ [ಬಜ್ಝಿದುಂ ಚಿಂತಾ] ಬಂಧನದ ಚಿಂತೆಯು [ಕಯಾಇ ವಿ] ಎಂದೂ [ಣ ಉಪ್ಪಜ್ಜದಿ]

ಕಳವು ಮೊದಲಾದಪರಾಧ ಮಾಡಿದ ಪುರುಷ ಸಂಚರಿಸುವಾಗ ತನ್ನನು ।
ಕಳ್ಳನೆಂದರಿದು ಬಂಧಿಸದಿರಲೆಂಬ ಸಾಶಂಕದಿಂ ಲೋಕದಲಿ ತಿರುಗುವನು ॥೩೦೧॥

ಯಾವನಪರಾಧಗಳ ಮಾಡದಾತ ನಿಶ್ಶಂಕದಿಂ ಲೋಕದಲಿ ತಿರುಗುವನು ।
ಅವನಿಗೆ 'ತಾನು ಬಂಧಿಸಲ್ಪಡಬಹುದೆ'ಂಬಚಿಂತೆಯೆಂದು ಇರುವುದೇಇಲ್ಲ ॥೩೦೨॥

ಏವಮ್ಹಿ ಸಾವರಾಹೋ ಬಜ್ಝಾಮಿ ಅಹಂ ತು ಸಂಕಿದೋ ಚೇದಾ ।
ಜಇ ಪುಣ ಣಿರಾವರಾಹೋ ಣಿಸ್ಸಂಕೋಹಂ ಣ ಬಜ್ಝಾಮಿ ॥೩೦೩॥

ಸ್ತೇಯಾದೀನಪರಾಧಾನ್ ಯಃ ಕರೋತಿ ಸ ತು ಶಂಕಿತೋ ಭ್ರಮತಿ ।
ಮಾ ಬಧ್ಯೇ ಕೇನಾಪಿ ಚೌರ ಇತಿ ಜನೇ ವಿಚರನ್ ॥೩೦೧॥

ಯೋ ನ ಕರೋತ್ಯಪರಾಧಾನ್ ಸ ನಿಶ್ಶಂಕಸ್ತು ಜನಪದೇ ಭ್ರಮತಿ ।
ನಾಪಿ ತಸ್ಯ ಬದ್ಧುಂ ಯಚ್ಚಿಂತೋತ್ಪದ್ಯತೇ ಕದಾಚಿತ್ ॥೩೦೨॥

ಏವಮಸ್ಮಿ ಸಾಪರಾಧೋ ಬಧ್ಯೇಽಹಂ ತು ಶಂಕಿತಶ್ಚೇತಯಿತಾ ।
ಯದಿ ಪುನರ್ನಿರಪರಾಧೋ ನಿಶ್ಶಂಕೋಽಹಂ ನ ಬಧ್ಯೇ ॥೩೦೩॥

ಯಥಾತ್ರ ಲೋಕೇ ಯ ಏವ ಪರದ್ರವ್ಯಗ್ರಹಣಲಕ್ಷಣಮಪರಾಧಂ ಕರೋತಿ ತಸ್ಯೈವ ಬಂಧಶಂಕಾ ಸಂಭವತಿ, ಯಸ್ತು ತಂ ನ ಕರೋತಿ ತಸ್ಯ ಸಾ ನ ಸಂಭವತಿ; ತಥಾತ್ಮಾಪಿ ಯ ಏವಾಶುದ್ಧಃ ಸನ್ ಪರದ್ರವ್ಯಗ್ರಹಣಲಕ್ಷಣಮಪರಾಧಂ ಕರೋತಿ ತಸ್ಯೈವ ಬಂಧಶಂಕಾ ಸಂಭವತಿ, ಯಸ್ತು ಶುದ್ಧಃ ಸಂಸ್ತಂ ನ ಕರೋತಿ ತಸ್ಯ ಸಾ ನ ಸಂಭವತೀತಿ ನಿಯಮಃ । ಅತಃ ಸರ್ವಥಾ ಸರ್ವಪರಕೀಯಭಾವಪರಿಹಾರೇಣ ಶುದ್ಧ ಆತ್ಮಾ ಗೃಹೀತವ್ಯಃ, ತಥಾ ಸತ್ಯೇವ ನಿರಪರಾಧತ್ವಾತ್ ।

ಉತ್ಪನ್ನವಾಗುವುದಿಲ್ಲ. [ಏವ] ಇದೇ ಪ್ರಕಾರ [ಚೇದಾ] ಅಪರಾಧಿಯಾದ ಆತ್ಮನು '[ಸಾವರಾಹೋ ಮ್ಹಿ] 'ನಾನು ಅಪರಾಧಿಯಾಗಿದ್ದೇನೆ [ಬಜ್ಝಾಮಿ ತು ಅಹಂ] ಅದಕ್ಕಾಗಿ ನಾನು ಬಂಧಿಸಲ್ಪಡಬಹುದು'–ಎಂದು [ಸಂಕಿದೋ] ಸಾಶಂಕನಾಗುತ್ತಾನೆ, [ಜಇ ಪುಣ] ಮತ್ತು ಒಂದುವೇಳೆ [ಣಿರಾವರಾಹೋ] (ಆತ್ಮನು) ನಿರಪರಾಧಿಯಾಗಿದ್ದರೆ [ಅಹಂ ಣ ಬಜ್ಝಾಮಿ] 'ನಾನು ಬಂಧನಕ್ಕೊಳಗಾಗಲಾರೆ'ನೆಂದು [ಣಿಸ್ಸಂಕೋ] ನಿಶ್ಶಂಕನಿರುತ್ತಾನೆ.

ಟೀಕೆ :- ಯಾವ ಪ್ರಕಾರ ಈ ಜಗತ್ತಿನಲ್ಲಿ (ಯಾವ ಪುರುಷನು) ಪರದ್ರವ್ಯದ ಗ್ರಹಣೆಮಾಡುವುದು ಯಾವುದರ ಲಕ್ಷಣವಿದೆ ಅಂಥ ಅಪರಾಧವನ್ನು ಮಾಡುತ್ತಾನೆ ಅವನಿಗೆ ಬಂಧನದ ಸಂಶಯವಿರುತ್ತದೆ ಮತ್ತು ಯಾವನು ಅಪರಾಧ ಮಾಡುವುದಿಲ್ಲ ಅವನಿಗೆ ಬಂಧನದ ಸಂಶಯವಿರುವುದಿಲ್ಲ. ಇದೇ ಪ್ರಕಾರ ಆತ್ಮನೂ ಅಶುದ್ಧನಾಗಿ ಪ್ರವರ್ತಿಸುತ್ತ, ಪರದ್ರವ್ಯದ ಗ್ರಹಣೆ ಮಾಡುವುದು ಯಾವುದರ ಲಕ್ಷಣವಿದೆ ಅಂಥ ಅಪರಾಧವನ್ನು ಮಾಡುತ್ತಾನೆ ಅವನಿಗೇನೆ ಬಂಧದ ಸಂಶಯವಿರುತ್ತದೆ ಹಾಗೂ ಯಾವನು ಶುದ್ಧವಾಗಿ ವರ್ತಿಸುತ್ತ ಅಪರಾಧವನ್ನು ಮಾಡುವುದಿಲ್ಲ ಅವನಿಗೆ ಬಂಧದ ಸಂಶಯವಿರುವುದಿಲ್ಲ- ಎಂಬುದು ನಿಯಮವಿದೆ. ಅದಕ್ಕಾಗಿ ಎಲ್ಲ ಪರಕೀಯ ಭಾವಗಳನ್ನು ಸರ್ವಥಾ ಪರಿಹರಿಸಿ (ಎಂದರೆ ಪರದ್ರವ್ಯದ ಎಲ್ಲ ಭಾವಗಳನ್ನು ಬಿಟ್ಟುಕೊಟ್ಟು) ಶುದ್ಧಾತ್ಮನನ್ನು ಗ್ರಹಣೆ ಮಾಡಬೇಕು, ಏಕೆಂದರೆ ಹೀಗೆ ಮಾಡಿದ ನಂತರವೇ ಆತ್ಮನ ನಿಪರಾಧತ್ವ ಉಂಟಾಗುತ್ತದೆ.

'ತಾನು ಬದ್ಧನಾಗಬಹುದೆ'ಂದಪರಾಧಿಯಾದಾತ್ಮ ಸಾಶಂಕದಿಂದಿರುವನು ।
'ತಾನು ಬದ್ಧನಾಗುವುದಿಲ್ಲೆ'ಂದು ನಿರಪರಾಧಾತ್ಮ ನಿಶ್ಶಂಕದಿಂದಿರುವನು ॥೩೦೩॥

ಕೋ ಹಿ ನಾಮಾಯಮಪರಾಧಃ ?

ಸಂಸಿದ್ಧಿರಾಧಸಿದ್ಧಂ ಸಾಧಿಯಮಾರಾಧಿಯಂ ಚ ಏಯಟ್ಠಂ ।
ಅವಗದರಾಧೋ ಜೋ ಖಲು ಚೇದಾ ಸೋ ಹೋದಿ ಅವರಾಧೋ ॥೩೦೪॥

ಜೋ ಪುಣ ಣಿರಾವರಾಧೋ ಚೇದಾ ಣಿಸ್ಸಂಕಿಓ ಉ ಸೋ ಹೋಇ ।
ಆರಾಹಣಾಇ ಣಿಚ್ಚಂ ವಟ್ಟೇಇ ಅಹಂ ತಿ ಜಾಣಂತೋ ॥೩೦೫॥

ಭಾವಾರ್ಥ :- ಒಂದವೇಳೆ ಮನುಷ್ಯನು ಕಳವು ಮೊದಲಾದ ಅಪರಾಧಗಳನ್ನು ಮಾಡಿದರೆ ಅವನಿಗೆ ಬಂಧನದ ಸಂಶಯವಿರುತ್ತದೆ; ನಿರಪರಾಧನಿಗೇಕೆ ಸಂಶಯವಿರುವುದು? ಇದೇ ಪ್ರಕಾರ ಒಂದುವೇಳೆ ಆತ್ಮನು ಪರದ್ರವ್ಯದ ಗ್ರಹಣರೂಪವಾದ ಅಪರಾಧ ಮಾಡಿದರೆ ಅವನಿಗೆ ಬಂಧದ ಸಂಶಯವು ಅವಶ್ಯವಾಗಿ ಇರುತ್ತದೆ; ಒಂದುವೇಳೆ ತನ್ನನ್ನು ಶುದ್ಧವಾಗಿ ಅನುಭವಿಸಿದರೆ, ಪರದ್ರವ್ಯದ ಗ್ರಹಣೆ ಮಾಡದಿದ್ದರೆ ಬಂಧದ ಸಂಶಯವೇಕಿರುತ್ತದೆ? ಅದಕ್ಕಾಗಿ ಪರದ್ರವ್ಯವನ್ನು ಬಿಟ್ಟುಕೊಟ್ಟು ಶುದ್ಧವಾದ ಆತ್ಮನ ಗ್ರಹಣೆ ಮಾಡಬೇಕು ಆಗಲೇ ಆತ್ಮನು ನಿರಪರಾಧಿಯಾಗುತ್ತಾನೆ.

ಈ 'ಅಪರಾಧ'ವು ಎಂಥದಿದೆ?—ಎಂಬ ಪ್ರಶ್ನೆಯ ಉತ್ತರದಲ್ಲಿ ಅಪರಾಧದ ಸ್ವರೂಪವನ್ನು ಗಾಥಾ ಸೂತ್ರಗಳಿಂದ ಹೇಳುತ್ತಾರೆ,—

ಗಾಥೆ - ೩೦೪-೩೦೫

ಗಾಥಾರ್ಥ :- [ಸಂಸಿದ್ಧಿರಾಧಸಿದ್ಧಂ] ಸಂಸಿದ್ಧಿ, ರಾಧ,* ಸಿದ್ಧ, [ಸಾಧಿಯಮಾರಾಧಿಯಂ ಚ] ಸಾಧಿತ ಮತ್ತು ಆರಾಧಿತ [ಏಯಟ್ಠಂ] - ಇವು ಏಕಾರ್ಥವಾಚಿಯಾದ ಶಬ್ದಗಳಾಗಿವೆ; [ಜೋ ಖಲು ಚೇದಾ] ಯಾವ ಆತ್ಮನು [ಅವಗದರಾಧೋ] ಅಪಗತರಾಧ ಎಂದರೆ ರಾಧದಿಂದ ರಹಿತನಾಗಿದ್ದಾನೆ [ಸೋ] ಆ ಆತ್ಮನು [ಅವರಾಧೋ ಹೋದಿ] ಅಪರಾಧನಿದ್ದಾನೆ.

[ಪುಣ] ಮತ್ತು [ಜೋ ಚೇದಾ] ಯಾವ ಆತ್ಮನು [ಣಿರಾವರಾಧೋ] ನಿರಪರಾಧನಿದ್ದಾನೆ [ಸೋ ಉ] ಅವನು [ಣಿಸ್ಸಂಕಿಓ ಹೋಇ] ನಿಶ್ಶಂಕನಿರುತ್ತಾನೆ; [ಅಹಂ ತಿ ಜಾಣಂತೋ] 'ಯಾವ

ಸಾಧಿತ, ಆರಾಧಿತ, ಸಂಸಿದ್ಧಿ, ರಾಧ, ಮೇಣ್ ಸಿದ್ಧಯೆಂಬಿವೇಕಾರ್ಥವಾಚಿಯಿವೆ ।
ರಾಧದಿಂದಾವಾತ್ಮರಹಿತನಾಗಿಹನವನು ಅಪರಾಧನಾಗಿರುವನು ॥೩೦೪॥

ಯಾವಾತ್ಮ ಮೇಣ್ ನಿರಪರಾಧನಾಗಿಹನವನು ನಿಶ್ಶಂಕದಿಂದಿರುವನು ।
'ಯಾವ ಶುದ್ಧಾತ್ಮನೇ ತಾನೆ'ಂದರಿತು ನಿತ್ಯಆರಾಧನೆಯಿಂದ ವರ್ತಿಸುವನು ॥೩೦೫॥

* ರಾಧ = ಆರಾಧನೆ; ಪ್ರಸನ್ನತೆ; ಕೃಪೆ; ಸಿದ್ಧಿ; ಪೂರ್ಣತೆ; ಸಿದ್ಧಮಾಡುವುದು; ಪೂರ್ಣ ಮಾಡುವುದು.

ಸಂಸಿದ್ಧಿರಾಧಸಿದ್ಧಂ ಸಾಧಿತಮಾರಾಧಿತಂ ಚೈಕಾರ್ಥಮ್ ।
ಅಪಗತರಾಧೋ ಯಃ ಖಲು ಚೇತಯಿತಾ ಸ ಭವತ್ಯಪರಾಧಃ ॥೩೦೪॥

ಯಃ ಪುನರ್ನಿರಪರಾಧಶ್ಚೇತಯಿತಾ ನಿಶ್ಶಂಕಿತಸ್ತು ಸ ಭವತಿ ।
ಆರಾಧನಯಾ ನಿತ್ಯಂ ವರ್ತತೇ ಅಹಮಿತಿ ಜಾನನ್ ॥೩೦೫॥

ಪರದ್ರವ್ಯಪರಿಹಾರೇಣ ಶುದ್ಧಸ್ಯಾತ್ಮನಃ ಸಿದ್ಧಿಃ ಸಾಧನಂ ವಾ ರಾಧಃ। ಅಪಗತೋ ರಾಧೋ ಯಸ್ಯ ಚೇತಯಿತುಃ ಸೋಽಪರಾಧಃ। ಅಥವಾ ಅಪಗತೋ ರಾಧೋ ಯಸ್ಯ ಭಾವಸ್ಯ ಸೋಽಪರಾಧಃ, ತೇನ ಸಹ ಯಶ್ಚೇತಯಿತಾ ವರ್ತತೇ ಸ ಸಾಪರಾಧಃ । ಸ ತು ಪರದ್ರವ್ಯಗ್ರಹಣಸದ್ಭಾವೇನ ಶುದ್ಧಾತ್ಮಸಿದ್ಧ್ಯ-ಭಾವಾದ್ಬಂಧಶಂಕಾಸಂಭವೇ ಸತಿ ಸ್ವಯಮಶುದ್ಧತ್ವಾದನಾರಾಧಕ ಏವ ಸ್ಯಾತ್ । ಯಸ್ತು ನಿರಪರಾಧಃ ಸ ಸಮಗ್ರಪರದ್ರವ್ಯಪರಿಹಾರೇಣ ಶುದ್ಧಾತ್ಮಸಿದ್ಧಿಸದ್ಭಾವಾದ್ಬಂಧಶಂಕಾಯಾ ಅಸಂಭವೇ ಸತಿ ಉಪಯೋ-ಗೈಕಲಕ್ಷಣಶುದ್ಧ ಆತ್ಮೈಕ ಏವಾಹಮಿತಿ ನಿಶ್ಚಿನ್ವನ್ ನಿತ್ಯಮೇವ ಶುದ್ಧಾತ್ಮಸಿದ್ಧಿಲಕ್ಷಣಯಾರಾಧನಯಾ ವರ್ತಮಾನತ್ವಾದಾರಾಧಕ ಏವ ಸ್ಯಾತ್ ।

ಶುದ್ಧಾತ್ಮನಿದ್ದಾನೆ ಅವನೇ ನಾನಿದ್ದೇನೆ'–ಎಂದು ತಿಳಿದುಕೊಳ್ಳುತ್ತ [ಣಿಚ್ಚಂ] ಯಾವಾಗಲೂ [ಆರಾಹಣಾಇ] ಆರಾಧನೆಯಿಂದ [ವಟ್ಟೇಇ] ವರ್ತಿಸುತ್ತಾನೆ.

ಟೀಕೆ :– ಪರದ್ರವ್ಯದ ಪರಿಹಾರದಿಂದ ಯಾವ ಶುದ್ಧಾತ್ಮನ ಸಿದ್ಧಿ ಅಥವಾ ಸಾಧನೆಯಿದೆ ಅದು ರಾಧವಿದೆ. ಯಾವ ಆತ್ಮನು 'ಅಪಗತರಾಧ' ಎಂದರೆ ರಾಧರಹಿತನಾಗಿದ್ದಾನೆ ಆ ಆತ್ಮನು ಅಪರಾಧನಿದ್ದಾನೆ. ಅಥವಾ (ಇನ್ನೊಂದು ಸಮಾಸವಿಗ್ರಹವು ಹೀಗಿದೆ:–) ಯಾವ ಭಾವವು ರಾಧರಹಿತವಾಗಿದೆ ಆ ಭಾವವು ಅಪರಾಧವಿದೆ; ಆ ಅಪರಾಧಯುಕ್ತನಾಗಿ ಯಾವ ಆತ್ಮನು ವರ್ತಿಸುತ್ತಾನೆ ಆ ಆತ್ಮನು ಸಾಪರಾಧನಿದ್ದಾನೆ. ಆ ಆತ್ಮನು, ಪರದ್ರವ್ಯದ ಸ್ವೀಕಾರದ ಸದ್ಭಾವದಿಂದ ಶುದ್ಧಾತ್ಮನ ಸಿದ್ಧಿಯ ಅಭಾವದ ಕಾರಣವಾಗಿ ಬಂಧದ ಸಂಶಯವಿರುತ್ತದೆ. ಅದಕ್ಕಾಗಿ ತಾನು ಅಶುದ್ಧನಾಗುವುದರಿಂದ ಅನಾರಾಧಕನೇ ಇದ್ದಾನೆ. ಮತ್ತು ಯಾವ ಆತ್ಮನು ನಿರಪರಾಧನಿದ್ದಾನೆ ಅವನು ಸಮಸ್ತ ಪರದ್ರವ್ಯದ ಪರಿಹಾರದಿಂದ ಶುದ್ಧಾತ್ಮನ ಸಿದ್ಧಿಯ ಸದ್ಭಾವದ ಕಾರಣವಾಗಿ ಬಂಧದ ಸಂದೇಹವಿರುವುದಿಲ್ಲವಾದ್ದರಿಂದ 'ಯಾವುದರ ಲಕ್ಷಣವು ಒಂದು ಉಪಯೋಗವೇ ಆಗಿದೆ, ಅಂಥ ಶುದ್ಧಾತ್ಮನೇ ನಾನಿದ್ದೇನೆ'–ಎಂದು ನಿಶ್ಚಯ ಮಾಡುತ್ತ, ಶುದ್ಧಾತ್ಮನ ಸಿದ್ಧಿಯು ಯಾವುದರ ಲಕ್ಷಣವಿದೆ ಅಂಥ ಆರಾಧನೆಯಿಂದ ಯಾವಾಗಲೂ ವರ್ತಿಸುತ್ತಿರುವುದರಿಂದ ಆರಾಧಕನೇ ಆಗಿದ್ದಾನೆ.

ಭಾವಾರ್ಥ :– ಸಂಸಿದ್ಧಿ, ರಾಧ, ಸಿದ್ಧಿ, ಸಾಧಿತ ಮತ್ತು ಆರಾಧಿತ–ಇವೆಲ್ಲ ಶಬ್ದಗಳ ಅರ್ಥವು ಒಂದೇ ಇದೆ. ಇಲ್ಲಿ ಶುದ್ಧಾತ್ಮನ ಸಿದ್ಧಿ ಅಥವಾ ಸಾಧನೆಯ ಹೆಸರು 'ರಾಧ'ವಿದೆ. ಯಾವನಿಗೆ ಈ ರಾಧವಿಲ್ಲ ಆ ಆತ್ಮನು ಸಾಪರಾಧನಿದ್ದಾನೆ ಮತ್ತು ಯಾವನಿಗೆ ಈ ರಾಧವಿದೆ ಆ ಆತ್ಮನು ನಿರಪರಾಧನಿದ್ದಾನೆ. ಯಾವನು ಸಾಪರಾಧನಿದ್ದಾನೆ ಅವನಿಗೆ ಬಂಧದ ಸಂಶಯವಿರುವುದರಿಂದ ಮತ್ತು ಅವನು ಸ್ವತಃ ಅಶುದ್ಧನಿರುವುದರಿಂದ ಅನಾರಾಧಕನಾಗಿದ್ದಾನೆ, ಮತ್ತು ಯಾವನು ನಿರಪರಾಧನಿದ್ದಾನೆ ಅವನು ನಿಶ್ಶಂಕನಿದ್ದು ತನ್ನ ಉಪಯೋಗದಲ್ಲಿ ಮಗ್ನನಾಗಿರುವುದರಿಂದ ಅವನಿಗೆ ಬಂಧದ ಸಂದೇಹವಿರುವುದಿಲ್ಲ, ಅದಕ್ಕಾಗಿ 'ಯಾವ ಶುದ್ಧಾತ್ಮನಿದ್ದಾನೆ ಅವನೇ ನಾನಿದ್ದೇನೆ'– ಎಂಬ ನಿಶ್ಚಯದೊಡನೆ ವರ್ತಿಸುತ್ತ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ ಮತ್ತು ತಪಸ್ಸು ಇವುಗಳ ಒಂದು ಭಾವರೂಪವಾದ ನಿಶ್ಚಯ ಆರಾಧನೆಯ ಆರಾಧಕನೇ ಆಗಿದ್ದಾನೆ.

(ಮಾಲಿನಿ)

ಅನವರತಮನಂತೈರ್ಬಧ್ಯತೇ ಸಾಪರಾಧಃ
ಸ್ಪೃಶತಿ ನಿರಪರಾಧೋ ಬಂಧನಂ ನೈವ ಜಾತು ।
ನಿಯತಮಯಮಶುದ್ಧಂ ಸ್ವಂ ಭಜನ್ಸಾಪರಾಧೋ
ಭವತಿ ನಿರಪರಾಧಃ ಸಾಧು ಶುದ್ಧಾತ್ಮಸೇವೀ ॥೧೮೭॥

ನನು ಕಿಮನೇನ ಶುದ್ಧಾತ್ಮೋಪಾಸನಪ್ರಯಾಸೇನ? ಯತಃ ಪ್ರತಿಕ್ರಮಣಾದಿನೈವ ನಿರಪರಾಧೋ ಭವತ್ಯಾತ್ಮಾ; ಸಾಪರಾಧಸ್ಯಾಪ್ರತಿಕ್ರಮಣಾದೇಸ್ತದನಪೋಹಕತ್ವೇನ ವಿಷಕುಂಭತ್ವೇ ಸತಿ ಪ್ರತಿಕ್ರಮಣಾದೇಸ್ತದಪೋಹಕತ್ವೇನಾಮೃತಕುಂಭತ್ವಾತ್ । ಉಕ್ತಂ ಚ ವ್ಯವಹಾರಾಚಾರಸೂತ್ರೇ—ಅಪ್ಪಡಿಕಮಣಮಪ್ಪಡಿಸರಣಂ ಅಪ್ಪಡಿಹಾರೋ ಅಧಾರಣಾ ಚೇವ। ಅಣಿಯತ್ತೀ ಯ ಅಣಿಂದಾಗರಹಾಸೋಹೀ ಯ ವಿಸಕುಂಭೋ ॥೧॥ ಪಡಿಕಮಣಂ ಪಡಿಸರಣಂ ಪರಿಹಾರೋ ಧಾರಣಾ ಣಿಯತ್ತೀ ಯ । ಣಿಂದಾ ಗರಹಾ ಸೋಹೀ ಅಟ್ಠವಿಹೋ ಅಮಯಕುಂಭೋ ದು ॥೨॥

ಅತ್ರೋಚ್ಯತೇ—

ಪಡಿಕಮಣಂ ಪಡಿಸರಣಂ ಪರಿಹಾರೋ ಧಾರಣಾ ಣಿಯತ್ತೀ ಯ ।
ಣಿಂದಾ ಗರಹಾ ಸೋಹೀ ಅಟ್ಠವಿಹೋ ಹೋದಿ ವಿಸಕುಂಭೋ ॥೩೦೬॥

ಈಗ ಇದೇ ಅರ್ಥದ ಕಲಶರೂಪವಾದ ಕಾವ್ಯವನ್ನು ಹೇಳುತ್ತಾರೆ,—

ಶ್ಲೋಕಾರ್ಥ :- [ಸಾಪರಾಧಃ] ಅಪರಾಧಯುಕ್ತ ಆತ್ಮನು [ಅನವರತಂ] ನಿರಂತರವಾಗಿ [ಅನಂತೈಃ] ಅನಂತ ಪುದ್ಗಲಪರಮಾಣುರೂಪವಾದ ಕರ್ಮಗಳಿಂದ [ಬಧ್ಯತೇ] ಕಟ್ಟಲ್ಪಡುತ್ತಾನೆ; [ನಿರಪರಾಧಃ] ನಿರಪರಾಧನಾದ ಆತ್ಮನು [ಬಂಧನಂ] ಬಂಧನವನ್ನು [ಜಾತು] ಎಂದೂ [ಸ್ಪೃಶತಿ ನ ಏವ] ಸ್ಪರ್ಶಿಸುವುದೇ ಇಲ್ಲ. [ಅಯಂ] ಯಾವ ಅಪರಾಧಯುಕ್ತನಾದ ಆತ್ಮನಿದ್ದಾನೆ ಅವನಂತೂ [ನಿಯತಂ] ನಿಯಮದಿಂದ [ಸ್ವಂ ಅಶುದ್ಧಂ ಭಜನ್] ತನ್ನನ್ನು ಅಶುದ್ಧವಾಗಿ ಸೇವನೆ ಮಾಡುತ್ತ [ಸಾಪರಾಧಃ] ಅಪರಾಧಯುಕ್ತನಾಗಿದ್ದಾನೆ; [ನಿರಪರಾಧಃ] ನಿರಪರಾಧನಾದ ಆತ್ಮನಂತೂ [ಸಾಧು] ಒಳ್ಳೆಯ ರೀತಿಯಿಂದ [ಶುದ್ಧಾತ್ಮಸೇವೀ ಭವತಿ] ಶುದ್ಧಾತ್ಮನ ಸೇವನೆ ಮಾಡುವವನಾಗಿರುತ್ತಾನೆ. ॥೧೮೭॥

(ಇಲ್ಲಿ ವ್ಯವಹಾರನಯಾವಲಂಬೀ ಎಂದರೆ ವ್ಯವಹಾರನಯವನ್ನು ಅವಲಂಬನೆ ಮಾಡುವಂಥವನು ಹೀಗೆ ತರ್ಕಮಾಡುತ್ತಾನೆ:-) ಶುದ್ಧಾತ್ಮನ ಉಪಾಸನೆಯ ಪ್ರಯಾಸ ಮಾಡುವುದರಿಂದ ಯಾವ ಲಾಭವಿದೆ? ಏಕೆಂದರೆ ಪ್ರತಿಕ್ರಮಣ ಮೊದಲಾದವುಗಳಿಂದಲೇ ಆತ್ಮನು ನಿರಪರಾಧನಾಗುತ್ತಾನೆ; ಏಕೆಂದರೆ ಅಪರಾಧಯುಕ್ತನ ಯಾವ ಅಪ್ರತಿಕ್ರಮಣ ಮೊದಲಾದವುಗಳಿವೆ ಅವು ಅಪರಾಧವನ್ನು ದೂರಮಾಡುವಂಥವುಗಳಾಗದಿರುವುದರಿಂದ

ಪ್ರತಿಕ್ರಮಣ ಪರಿಹಾರ, ಧಾರಣೆ, ನಿವೃತ್ತಿ, ನಿಂದೆ, ಗರ್ಹೆ ಮತ್ತದರಂತೆ ।
ಪ್ರತಿಸರಣ, ಶುದ್ಧಿಯೆಂಬಿವೆಂಟು ಪ್ರಕಾರದ ವಿಷಕುಂಭಗಳಾಗಿವೆ ॥೩೦೬॥

ಅಪ್ಪಡಿಕಮಣಮಪ್ಪಡಿಸರಣಂ ಅಪ್ಪರಿಹಾರೋ ಅಧಾರಣಾ ಚೇವ ।
ಅಣಿಯತ್ತೀ ಯ ಅಣಿಂದಾಗರಹಾಸೋಹೀ ಅಮಯಕುಂಭೋ ॥೩೦೭॥

ಪ್ರತಿಕ್ರಮಣಂ ಪ್ರತಿಸರಣಂ ಪರಿಹಾರೋ ಧಾರಣಾ ನಿವೃತ್ತಿಶ್ಚ ।
ನಿಂದಾಗರ್ಹಾ ಶುದ್ಧಿಃ ಅಷ್ಟವಿಧೋ ಭವತಿ ವಿಷಕುಂಭಃ ॥೩೦೬॥

ಅಪ್ರತಿಕ್ರಮಣಮಪ್ರತಿಸರಣಮಪರಿಹಾರೋಽಧಾರಣಾ ಚೈವ ।
ಅನಿವೃತ್ತಿಶ್ಚಾನಿಂದಾಽಗರ್ಹಾಽಶುದ್ಧಿರಮೃತಕುಂಭಃ ॥೩೦೭॥

ವಿಷಕುಂಭಗಳಾಗಿವೆ; ಆದಕ್ಕಾಗಿ ಯಾವ ಪ್ರತಿಕ್ರಮಣ ಮೊದಲಾದವುಗಳಿವೆ ಅವು ಅಪರಾಧವನ್ನು ದೂರಮಾಡುವಂಥವುಗಳಾಗಿರುವುದರಿಂದ ಅಮೃತಕುಂಭಗಳಾಗಿವೆ. ವ್ಯವಹಾರದ ಕಥನಮಾಡುವಂಥ ಆಚಾರ ಸೂತ್ರದಲ್ಲೂ ಹೀಗೆ ಹೇಳಿದ್ದಾರೆ;—

[ಅರ್ಥ — "ಅಪ್ರತಿಕ್ರಮಣ, ಅಪ್ರತಿಸರಣ, ಅಪರಿಹಾರ, ಅಧಾರಣಾ, ಅನಿವೃತ್ತಿ, ಅನಿಂದೆ, ಅಗರ್ಹಾ ಮತ್ತು ಅಶುದ್ಧಿ—ಇವು (ಎಂಟು ಪ್ರಕಾರದ) ವಿಷಕುಂಭವಿವೆ. ॥೧॥

೧ಪ್ರತಿಕ್ರಮಣ, ೨ಪ್ರತಿಸರಣೆ, ೩ಪರಿಹಾರ, ೪ಧಾರಣಾ, ೫ನಿವೃತ್ತಿ, ೬ನಿಂದೆ, ೭ಗರ್ಹಾ, ೮ಮತ್ತು ಶುದ್ಧಿ—ಇವು (ಎಂಟು ಪ್ರಕಾರದ) ಅಮೃತಕುಂಭವಿವೆ. ॥೨॥]"

ಮೇಲೆ ಹೇಳಿದ ಊಹೆಯ ಸಮಾಧಾನಮಾಡುತ್ತ ಆಚಾರ್ಯದೇವರು (ನಿಶ್ಚಯನಯದ ಪ್ರಾಮುಖ್ಯತೆಯಿಂದ) ಗಾಥೆಗಳ ಮುಖಾಂತರ ಹೀಗೆ ಹೇಳುತ್ತಾರೆ,—

ಗಾಥೆ - ೩೦೬-೩೦೭

ಗಾಥಾರ್ಥ :- [ಪಡಿಕಮಣಂ] ಪ್ರತಿಕ್ರಮಣ, [ಪಡಿಸರಣಂ] ಪ್ರತಿಸರಣ [ಪರಿಹಾರೋ] ಪರಿಹಾರ, [ಧಾರಣಾ] ಧಾರಣೆ, [ಣಿಯತ್ತೀ] ನಿವೃತ್ತಿ, [ಣಿಂದಾ] ನಿಂದೆ, [ಗರಹಾ] ಗರ್ಹಾ [ಯ ಸೋಹೀ] ಮತ್ತು

ಅಪ್ರತಿಕ್ರಮಣ, ಅಪರಿಹಾರ, ಅಧಾರಣೆ, ಅನಿವೃತ್ತಿ, ಅನಿಂದೆಯಲ್ಲದೆ ।
ಅಪ್ರತಿಸರಣ, ಅಗರ್ಹೆ, ಅಶುದ್ಧಿಯೆಂಬಿವು ಅಮೃತಕುಂಭಗಳಾಗಿವೆ ॥೩೦೭॥

---

೧) ಪ್ರತಿಕ್ರಮಣ = ಮಾಡಿದ ದೋಷಗಳ ನಿರಾಕರಣೆ.
೨) ಪ್ರತಿಸರಣ = ಸಮ್ಯಕ್ತ್ವ ಮೊದಲಾದ ಗುಣಗಳಲ್ಲಿ ಪ್ರೇರಣೆ.
೩) ಪರಿಹಾರ = ಮಿಥ್ಯಾತ್ವ ರಾಗಾದಿದೋಷಗಳ ನಿರಾಕರಣೆ.
೪) ಧಾರಣಾ = ಪಂಚನಮಸ್ಕಾರ ಮೊದಲಾದ ಮಂತ್ರ, ಪ್ರತಿಮೆ ಇವೇ ಮೊದಲಾದ ಬಾಹ್ಯದ್ರವ್ಯಗಳ ಅವಲಂಬನೆಯಿಂದ ಚಿತ್ತವನ್ನು ಸ್ಥಿರಗೊಳಿಸುವುದು.
೫) ನಿವೃತ್ತಿ = ಬಾಹ್ಯವಿಷಯಕಷಾಯ ಮೊದಲಾದ ಇಚ್ಛೆಯಲ್ಲಿ ಪ್ರವರ್ತಮಾನವಾದ ಚಿತ್ತವನ್ನು ಹಿಂದೆ ತೆಕ್ಕೊಳ್ಳುವುದು.
೬) ನಿಂದ = ಆತ್ಮಸಾಕ್ಷಿಯಾಗಿ ದೋಷಗಳನ್ನು ಪ್ರಕಟಪಡಿಸುವುದು.
೭) ಗರ್ಹಾ = ಗುರುಗಳ ಸಾಕ್ಷಿಯಾಗಿ ದೋಷಗಳನ್ನು ಪ್ರಕಟಪಡಿಸುವುದು.
೮) ಶುದ್ಧಿ = ದೋಷಗಳಾದನಂತರ ಪ್ರಾಯಶ್ಚಿತ್ತ ತೆಗೆದುಕೊಂಡು ವಿಶುದ್ಧಿಮಾಡುವುದು.

ಯಸ್ತಾವದಜ್ಞಾನಿಜನಸಾಧಾರಣೋಽಪ್ರತಿಕ್ರಮಣಾದಿಃ ಸ ಶುದ್ಧಾತ್ಮಸಿದ್ಧ್ಯಭಾವಸ್ವಭಾವತ್ವೇನ ಸ್ವಯಮೇವಾಪರಾಧತ್ವಾದ್ವಿಷಕುಂಭ ಏವ; ಕಿಂ ತಸ್ಯ ವಿಚಾರೇಣ ? ಯಸ್ತು ದ್ರವ್ಯರೂಪಃ ಪ್ರತಿಕ್ರಮಣಾದಿಃ ಸ ಸರ್ವಾಪರಾಧವಿಷದೋಷಾಪಕರ್ಷಣಸಮರ್ಥತ್ವೇನಾಮೃತಕುಂಭೋಽಪಿ ಪ್ರತಿಕ್ರಮಣಾಪ್ರತಿಕ್ರಮಣಾದಿವಿಲಕ್ಷಣಾಪ್ರತಿಕ್ರಮಣಾದಿರೂಪಾಂ ತಾರ್ತೀಯೀಕೀಂ ಭೂಮಿಮಪಶ್ಯತಃ ಸ್ವಕಾರ್ಯಕರಣಾಸಮರ್ಥತ್ವೇನ ವಿಪಕ್ಷಕಾರ್ಯಕಾರಿತ್ವಾದ್ವಿಷಕುಂಭ ಏವ ಸ್ಯಾತ್ । ಅಪ್ರತಿಕ್ರಮಣಾದಿರೂಪಾ ತೃತೀಯಾ ಭೂಮಿಸ್ತು ಸ್ವಯಂ ಶುದ್ಧಾತ್ಮಸಿದ್ಧಿರೂಪತ್ವೇನ ಸರ್ವಾಪರಾಧವಿಷದೋಷಾಣಾಂ ಸರ್ವಂಕಷತ್ವಾತ್ ಸಾಕ್ಷಾತ್ ಸ್ವಯಮಮೃತಕುಂಭೋ ಭವತೀತಿ ವ್ಯವಹಾರೇಣ ದ್ರವ್ಯಪ್ರತಿಕ್ರಮಣಾದೇರಪಿ ಅಮೃತಕುಂಭತ್ವಂ ಸಾಧಯತಿ । ತಯೈವ ಚ ನಿರಪರಾಧೋ ಭವತಿ ಚೇತಯಿತಾ । ತದಭಾವೇ ದ್ರವ್ಯಪ್ರತಿಕ್ರಮಣಾದಿರಪ್ಯಪರಾಧ ಏವ । ಅತಸ್ತೃತೀಯಭೂಮಿಕಯೈವ ನಿರಪರಾಧತ್ವಮಿತ್ಯವತಿಷ್ಠತೇ । ತತ್ಪ್ರಾಪ್ತ್ಯರ್ಥ ಏವಾಯಂ ದ್ರವ್ಯಪ್ರತಿಕ್ರಣಾದಿಃ । ತತೋ ಮೇತಿ ಮಂಸ್ಥಾ ಯತ್ಪ್ರತಿಕ್ರಮಣಾದೀನ್ ಶ್ರುತಿಸ್ತ್ಯಾಜಯತಿ, ಕಿಂತು ದ್ರವ್ಯಪ್ರತಿಕ್ರಮಣಾದಿನಾ ನ ಮುಂಚತಿ, ಅನ್ಯದಪಿ ಪ್ರತಿಕ್ರಮಣಾಪ್ರತಿಕ್ರಮಣಾದ್ಯಗೋಚರಾಪ್ರತಿಕ್ರಮಣಾದಿರೂಪಂ ಶುದ್ಧಾತ್ಮಸಿದ್ಧಿಲಕ್ಷಣಮತಿದುಷ್ಕರಂ ಕಿಮಪಿ ಕಾರಯತಿ । ವಕ್ಷ್ಯತೇ ಚಾತ್ರೈವ-ಕಮ್ಮಂ ಜಂ ಪುವ್ವಕಯಂ ಸುಹಾಸುಹಮಣೇಯವಿತ್ಥರವಿಸೇಸಂ । ತತ್ತೋ ಣಿಯತ್ತದೇ ಅಪ್ಪಯಂ ತು ಜೋ ಸೋ ಪಡಿಕ್ಕಮಣಂ ॥ ಇತ್ಯಾದಿ ।

ಶುದ್ಧಿ [ಅಟ್ಠವಿಹೋ] - ಇವು ಎಂಟು ಪ್ರಕಾರದ [ವಿಸಕುಂಭೋ) ವಿಷಕುಂಭಗಳು [ಹೋದಿ] ಇವೆ. (ಏಕೆಂದರೆ ಇದರಲ್ಲಿ ಕರ್ತೃತ್ವದ ಬುದ್ಧಿಯು ಸಂಭವಿಸುತ್ತದೆ.)

[ಅಪ್ಪಡಿಕಮಣಂ] ಅಪ್ರತಿಕ್ರಮಣ, [ಅಪ್ಪಡಿಸರಣಂ) ಅಪ್ರತಿಸರಣ, [ಅಪ್ಪರಿಹಾರೋ] ಅಪರಿಹಾರ, [ಅಧಾರಣಾ] ಅಧಾರಣೆ, [ಅಣಿಯತ್ತೀ ಯ] ಅನಿವೃತ್ತಿ, [ಅಣಿಂದಾ] ಅನಿಂದೆ, [ಅಗರಹಾ] ಅಗರ್ಹಾ [ಚೇವ] ಮತ್ತು [ಅಸೋಹೀ] ಅಶುದ್ಧಿ - [ಅಮಯಕುಂಭೋ] ಇವು ಅಮೃತಕುಂಭವಿವೆ. (ಏಕೆಂದರೆ ಇದರಲ್ಲಿ ಕರ್ತೃತ್ವದ ನಿಷೇಧವಿದೆ — ಏನನ್ನೂ ಮಾಡುವುದೇ ಇಲ್ಲ, ಆದ್ದರಿಂದ ಬಂಧವಾಗುವುದಿಲ್ಲ.)

ಟೀಕೆ :- ಮೊದಲಂತೂ ಯಾವ ಅಜ್ಞಾನೀ ಜನರಿಗೆ ಸಾಧಾರಣವಾದಂಥ ಅಪ್ರತಿಕ್ರಮಣಾದಿಗಳಿವೆ ಅವಂತೂ ಶುದ್ಧಾತ್ಮನ ಸಿದ್ಧಿಯಲ್ಲಿ ಅಭಾವರೂಪದ ಸ್ವಭಾವವುಳ್ಳವುಗಳಾಗಿರುವುದರಿಂದ ತಾನಾಗಿಯೇ ಅಪರಾಧ ರೂಪವಾಗಿ ವಿಷಕುಂಭಗಳೇ ಆಗಿವೆ; ಅವುಗಳ ವಿಚಾರಮಾಡುವುದರಿಂದ ಯಾವ ಪ್ರಯೋಜನವಿದೆ? (ಏಕೆಂದರೆ ಅವಂತೂ ಮೊದಲೇ ತ್ಯಾಗಮಾಡುವಂಥವುಗಳಾಗಿವೆ.) ಮತ್ತು ಯಾವ ದ್ರವ್ಯರೂಪದ ಪ್ರತಿಕ್ರಮಣಾದಿಗಳಿವೆ ಅವೆಲ್ಲವೂ ಅಪರಾಧರೂಪದ ವಿಷದ ದೋಷವನ್ನು (ಕ್ರಮದಿಂದ) ಕಡಿಮೆಮಾಡುವಲ್ಲಿ ಸಮರ್ಥವಾಗಿರುವುದರಿಂದ ಅಮೃತಕುಂಭಗಳಾಗಿವೆ. (ಇಂಥ ವ್ಯವಹಾರವನ್ನು ಆಚಾರಸೂತ್ರದಲ್ಲಿ ಹೇಳಲಾಗಿದೆ.) ಆದಾಗ್ಯೂ ಪ್ರತಿಕ್ರಮಣ - ಅಪ್ರತಿಕ್ರಮಣ ಮೊದಲಾದವುಗಳಿಂದ ವಿಲಕ್ಷಣವಾದಂಥ ಅಪ್ರತಿಕ್ರಮಣಾದಿರೂಪವಾದ ಮೂರನೆಯ ಭೂಮಿಕೆಯನ್ನು ನೋಡದಿರುವ ಪುರುಷನಿಗೆ ಅವು ದ್ರವ್ಯಪ್ರತಿಕ್ರಮಣ ಮೊದಲಾದ (ಅಪರಾಧ ನಾಶಮಾಡುವ) ತಮ್ಮ ಕಾರ್ಯ ಮಾಡುವಲ್ಲಿ ಅಸಮರ್ಥವಾಗಿರುವುದರಿಂದ ವಿಪಕ್ಷದ (ಎಂದರೆ ಬಂಧದ) ಕಾರ್ಯವನ್ನು ಮಾಡುತ್ತಿರುವುದರಿಂದ ವಿಷಕುಂಭವೇ ಆಗಿದೆ. ಯಾವ ಅಪ್ರತಿಕ್ರಮಣಾದಿರೂಪವಾದ ಮೂರನೆಯ ಭೂಮಿಕೆಯಿದೆ ಅದು ಸ್ವತಃ ಶುದ್ಧಾತ್ಮನ ಸಿದ್ಧಿರೂಪವಾಗಿರುವ ಕಾರಣದಿಂದ ಅಪರಾಧರೂಪದ ವಿಷದದೋಷಗಳನ್ನೆಲ್ಲ ಸಂಪೂರ್ಣವಾಗಿ ನಷ್ಟಗೊಳಿಸುವಂಥದ್ದಾಗಿರುವುದರಿಂದ ತಾನು ಪ್ರತ್ಯಕ್ಷವಾಗಿ ಅಮೃತಕುಂಭವಾಗಿದೆ ಮತ್ತು

ಅತೋ ಹತಾಃ ಪ್ರಮಾದಿನೋ ಗತಾಃ ಸುಖಾಸೀನತಾಂ
ಪ್ರಲೀನಂ ಚಾಪಲಮುನ್ಮೂಲಿತಮಾಲಂಬನಮ್ ।
ಆತ್ಮನ್ಯೇವಾಲಾನಿತಂ ಚ ಚಿತ್ತ-
ಮಾಸಂಪೂರ್ಣವಿಜ್ಞಾನಘನೋಪಲಬ್ಧೇಃ ॥೧೮೮॥

ಹೀಗೆ (ಆ ಮೂರನೆಯಭೂಮಿಕೆ) ವ್ಯವಹಾರದಿಂದ ದ್ರವ್ಯಪ್ರತಿಕ್ರಮಣ ಮೊದಲಾದುವನ್ನೂ ಅಮೃತಕುಂಭರೂಪವಾಗಿ ಸಾಧಿಸುತ್ತದೆ, ಆ ಮೂರನೆಯ ಭೂಮಿಕೆಯಿಂದಲೇ ಆತ್ಮನು ನಿರಪರಾಧನಾಗುತ್ತಾನೆ. ಅದರ (ಮೂರನೆಯಭೂಮಿಕೆಯ) ಅಭಾವದಿಂದ ದ್ರವ್ಯಪ್ರತಿಕ್ರಮಣಾದಿಗಳೂ ಅಪರಾಧವೇ ಆಗಿವೆ. ಅದಕ್ಕಾಗಿ ಮೂರನೆಯ ಭೂಮಿಕೆಯಿಂದಲೇ ನಿರಪರಾಧತ್ವವಿದೆಯೆಂದು ಸಿದ್ಧವಾಗುತ್ತದೆ. ಅದರ ಪ್ರಾಪ್ತಿಗಾಗಿಯೇ ಈ ದ್ರವ್ಯಪ್ರತಿಕ್ರಮಣಾದಿಗಳಿವೆ. ಹೀಗಾಗುವುದರಿಂದ (ನಿಶ್ಚಯನಯದ) ಶಾಸ್ತ್ರವು ದ್ರವ್ಯಪ್ರತಿಕ್ರಮಣಾದಿಗಳನ್ನು ಬಿಡಿಸುತ್ತದೆಂದು ತಿಳಿದುಕೊಳ್ಳಬಾರದು. ಆಗ ಮತ್ತೇನು ಮಾಡುತ್ತದೆ? ದ್ರವ್ಯಪ್ರತಿಕ್ರಮಣಾದಿಗಳಿಂದ ಬಿಡಿಸುವುದಿಲ್ಲ (ಸಿಕ್ಕಿಬೀಳಗೊಡುವುದಿಲ್ಲ); ಇದನ್ನು ಹೊರತುಪಡಿಸಿ ಬೇರೆಯೂ ಪ್ರತಿಕ್ರಮಣ - ಅಪ್ರತಿಕ್ರಮಣಾದಿಗಳಿಗೆ ಅಗೋಚರವಾದ ಅಪ್ರತಿಕ್ರಮಣಾದಿರೂಪವೂ, ಶುದ್ಧಾತ್ಮನ ಸಿದ್ಧಿಯು ಯಾವುದರ ಲಕ್ಷಣವಾಗಿದೆ, ಅಂಥದೂ ಅತ್ಯಂತ ಕಷ್ಟತರವಾದದ್ದೇನಾದರೂ ಮಾಡಿಸುತ್ತದೆ. ಈ ಗ್ರಂಥದಲ್ಲಿಯೇ*, ಕಮ್ಮಂ ಜಂ ಪುವ್ವಕಯಂ ಸುಹಾಸುಹಮಣೆಯ ವಿತ್ಥರವಿಸೇಸಂ । ತತ್ತೋ ಣಿಯತ್ತದೇ ಅಪ್ಪಯಂ ತು ಜೋ ಸೋ ಪಡಿಕ್ಕಮಣಂ ॥

(ಅರ್ಥ :- ಅನೇಕ ಪ್ರಕಾರದ ವಿಸ್ತಾರವುಳ್ಳ ಪೂರ್ವಕೃತ ಶುಭಾಶುಭ ಕರ್ಮಗಳಿಂದ ಯಾವನು ತನ್ನ ಆತ್ಮನನ್ನು ನಿವೃತ್ತಗೊಳಿಸುತ್ತಾನೆ ಆ ಆತ್ಮನು ಪ್ರತಿಕ್ರಮಣನಿದ್ದಾನೆ) —ಇತ್ಯಾದಿ.

ಭಾವಾರ್ಥ :- ''ಪ್ರತಿಕ್ರಮಣಾದಿಗಳಿಂದಲೇ ತಗಲಿದ ದೋಷಗಳಿಂದ ಆತ್ಮನು ಶುದ್ಧನಾಗುತ್ತಾನೆ- ಎಂದ ಮೇಲೆ ಮೊದಲಿನಿಂದಲೇ ಶುದ್ಧಾತ್ಮನ ಅವಲಂಬನೆಯ ಕುರಿತು ಕಷ್ಟಪಡುವ ಪ್ರಯೋಜನವೇನು ? ಶುದ್ಧವಾದನಂತರ ಅವನ ಅವಲಂಬನೆಯಾಗಬಹುದು; ಮೊದಲಿನಿಂದಲೇ ಅವಲಂಬನೆಗಾಗಿ ದುಃಖಪಡುವುದು ನಿಷ್ಫಲವಾಗಿದೆ''—ಎಂದು ವ್ಯವಹಾರನಯವನ್ನವಲಂಬಿಸಿದವರು ಹೇಳಿದ್ದರು. ಅದಕ್ಕೆ ಆಚಾರ್ಯದೇವರು ಹೀಗೆ ತಿಳಿಸಿಕೊಡುತ್ತಾರೆ—ಯಾವವು ದ್ರವ್ಯಪ್ರತಿಕ್ರಮಣಾದಿಗಳಾಗಿವೆ ಅವು ದೋಷಗಳನ್ನು ನಾಶಮಾಡುವಂಥವುಗಳಾಗಿದ್ದರೂ ಪ್ರತಿಕ್ರಮಣಾದಿಗಳಿಂದ ರಹಿತವಾದ ಯಾವ ಶುದ್ಧಾತ್ಮನ ಸ್ವರೂಪವಿದೆ ಅದರ ಅವಲಂಬನೆಯಿಲ್ಲದೆಯಂತೂ ದ್ರವ್ಯಪ್ರತಿಕ್ರಮಣಾದಿಗಳು ದೋಷ ಸ್ವರೂಪವೇ ಆಗಿವೆ, ಅವು ದೋಷಗಳನ್ನು ನಾಶಪಡಿಸುವಲ್ಲಿ ಸಮರ್ಥವಾಗಿಲ್ಲ; ಏಕೆಂದರೆ ನಿಶ್ಚಯದ ಅಪೇಕ್ಷೆಯಿಂದ ಯುಕ್ತವಾದ ವ್ಯವಹಾರನಯವೇ ಮೋಕ್ಷಮಾರ್ಗದಲ್ಲಿದೆ, ಕೇವಲ ವ್ಯವಹಾರದ ಪಕ್ಷವೇ ಮೋಕ್ಷಮಾರ್ಗದಲ್ಲಿಲ್ಲ, ಅದು ಬಂಧದ ಮಾರ್ಗವೇ ಆಗಿದೆ, ಅದಕ್ಕಾಗಿ ಹೀಗೆ ಹೇಳಿದ್ದಾರೆ—ಅಜ್ಞಾನಿಯ ಯಾವ ಅಪ್ರತಿಕ್ರಮಣಾದಿಗಳಿವೆ ಅವಂತೂ ವಿಷಕುಂಭವೇ ಇವೆ; ಅದರದಂತೂ ಹೇಳುವುದಾದರೂ ಏನಿದೆ? ಆದರೆ ವ್ಯವಹಾರಚಾರಿತ್ರದಲ್ಲಿ ಯಾವ ಪ್ರತಿಕ್ರಮಣಾದಿಗಳನ್ನು ಹೇಳಿದ್ದಾರೆ ಅವೂ ನಿಶ್ಚಯನಯದಿಂದ ವಿಷಕುಂಭಗಳೇ ಆಗಿವೆ, ಏಕೆಂದರೆ ಆತ್ಮನಂತೂ ಪ್ರತಿಕ್ರಮಣಾದಿಗಳಿಂದ ರಹಿತನೂ, ಶುದ್ಧನೂ, ಅಪ್ರತಿಕ್ರಮಣಾದಿಸ್ವರೂಪನೂ ಆಗಿದ್ದಾನೆ.

ಈಗ ಇದೇ ಕಥನವನ್ನು ಕಲಶರೂಪದ ಕಾವ್ಯದಿಂದ ಹೇಳುತ್ತಾರೆ,—

ಶ್ಲೋಕಾರ್ಥ :- [ಅತಃ] ಈ ಕಥನದಿಂದ, [ಸುಖ-ಆಸೀನತಾಂ ಗತಾಃ] ಸುಖಾಧೀನರಾದ (ಸುಖದಿಂದ ಕುಳಿತುಕೊಂಡು) [ಪ್ರಮಾದಿನಃ] ಮೈಮರೆದ ಜನರಿಗೆ [ಹತಾಃ] ಹತಾಶರೆಂದು ಹೇಳಿದೆ (ಎಂದರೆ ಅವರಿಗೆ

* ಗಾಥ ೩೮೩-೩೮೫ ರಲ್ಲಿ ನಿಶ್ಚಯ ಪ್ರತಿಕ್ರಮಣ ಮೊದಲಾದವುಗಳ ಸ್ವರೂಪವನ್ನು ಹೇಳಿದೆ.

(ವಸಂತತಿಲಕ)

ಯತ್ರಪ್ರತಿಕ್ರಮಣಮೇವ ವಿಷಂ ಪ್ರಣೀತಂ
ತತ್ರಾಪ್ರತಿಕ್ರಮಣಮೇವ ಸುಧಾ ಕುತಃ ಸ್ಯಾತ್ ।
ತತ್ಕಿಂ ಪ್ರಮಾದ್ಯತಿ ಜನಃ ಪ್ರಪತನ್ನಧೋಽಧಃ
ಕಿಂ ನೋರ್ಧ್ವಮೂರ್ಧ್ವಮಧಿರೋಹತಿ ನಿಷ್ಪ್ರಮಾದಃ ॥೧೮೯॥

ಸರ್ವಥಾ ಮೋಕ್ಷದ ಅನಧಿಕಾರಿಯೆಂದು ಹೇಳಿದೆ). [ಚಾಪಲಂ ಪ್ರಲೀನಂ] ಚಂಚಲತೆಯು (ವಿಚಾರವಿಲ್ಲದ ಕಾರ್ಯದ) ಪ್ರಳಯಮಾಡಿದೆ (ಎಂದರೆ ಆತ್ಮಪ್ರತೀತಿಯಿಲ್ಲದ ಕ್ರಿಯೆಗಳನ್ನು ಮೋಕ್ಷದ ಕಾರಣದಲ್ಲಿ ಮನ್ನಿಸಲಿಲ್ಲ), [ಆಲಂಬನಂ ಉನ್ಮೀಲಿತಂ] ಅವಲಂಬನೆಯನ್ನು ಕಿತ್ತೆಸೆಯಲಾಗಿದೆ (ಎಂದರೆ ಸಮ್ಯಗ್ದೃಷ್ಟಿಯು ದ್ರವ್ಯಪ್ರತಿಕ್ರಮಣ ಮೊದಲಾದುವನ್ನೂ ನಿಶ್ಚಯದಿಂದ ಬಂಧಕ್ಕೆ ಕಾರಣವೆಂದು ನಂಬಿ ಹೇಯವೆಂದು ಹೇಳಿದೆ), [ಆಸಂಪೂರ್ಣ-ವಿಜ್ಞಾನ-ಘನ-ಉಪಲಬ್ಧೇಃ] ಎಲ್ಲಿಯವರೆಗೆ ಸಂಪೂರ್ಣವಾಗಿ ವಿಜ್ಞಾನಘನ ಆತ್ಮನ ಪ್ರಾಪ್ತಿಯಾಗುವುದಿಲ್ಲ ಅದುವರೆಗೆ [ಆತ್ಮನಿ ಏವ ಚಿತ್ತಂ ಆಲಾನಿತಂ ಚ] (ಶುದ್ಧವಾದ) ಆತ್ಮವೆಂಬ ಕಂಬದಿಂದಲೇ ಚಿತ್ತವನ್ನು ಕಟ್ಟಿಹಾಕಿದೆ. (ಎಂದರೆ ವ್ಯವಹಾರದ ಅವಲಂಬನೆಯಿಂದ ಅನೇಕ ಪ್ರವೃತ್ತಿಗಳಲ್ಲಿ ಭ್ರಮಿಸುತ್ತಿರುವ ಚಿತ್ತವನ್ನು ಶುದ್ಧಚೈತನ್ಯಮಾತ್ರವಾದ ಆತ್ಮನಲ್ಲಿಯೇ ತೊಡಗಿಸುವುದಕ್ಕೆ ಹೇಳಿದೆ, ಏಕೆಂದರೆ ಅದೇ ಮೋಕ್ಷದ ಕಾರಣವಾಗಿದೆ.) ॥೧೮೮॥

ಇಲ್ಲಿ ನಿಶ್ಚಯನಯದಿಂದ ಪ್ರತಿಕ್ರಮಣ ಮೊದಲಾದುವಕ್ಕೆ ವಿಷಕುಂಭವೆಂದು ಹೇಳಿದೆ ಮತ್ತು ಅಪ್ರತಿಕ್ರಮಣ ಮೊದಲಾದುವಕ್ಕೆ ಅಮೃತಕುಂಭವೆಂದು ಹೇಳಿರುವುದರಿಂದ ಒಂದುವೇಳೆ ಯಾರಾದರೂ ವಿಪರೀತವಾಗಿ ತಿಳಿದುಕೊಂಡು ಪ್ರತಿಕ್ರಮಣ ಮೊದಲಾದುವನ್ನು ಬಿಟ್ಟುಕೊಟ್ಟು ಆಲಸಿಗಳಾದರೆ ಅವರಿಗೆ ತಿಳಿಸಿಕೊಡುವುದಕ್ಕಾಗಿ ಕಲಶರೂಪವಾದ ಕಾವ್ಯವನ್ನು ಹೇಳುತ್ತಾರೆ.—

ಶ್ಲೋಕಾರ್ಥ :- [ಯತ್ರ ಪ್ರತಿಕ್ರಮಣಂ ಏವ ವಿಷಂ ಪ್ರಣೀತಂ] (ಎಲೈ ಸೋದರನೇ !) ಪ್ರತಿಕ್ರಮಣಕ್ಕೇನೇ ಎಲ್ಲಿ ವಿಷವೆಂದು ಹೇಳಲಾಗಿದೆ, [ತತ್ರ ಅಪ್ರತಿಕ್ರಮಣಂ ಏವ ಸುಧಾ ಕುತಃ ಸ್ಯಾತ್] ಅಲ್ಲಿ ಅಪ್ರತಿಕ್ರಮಣವು ಅಮೃತವೆಲ್ಲಿಂದ ಆಗುವ ಸಾಧ್ಯತೆಯಿದೆ ? (ಎಂದರೆ ಆಗುವ ಸಾಧ್ಯತೆಯೇ ಇಲ್ಲ.) [ತತ್] ಎಂದ ಮೇಲೆ [ಜನಃ ಅಧಃ ಅಧಃ ಪ್ರಪತನ್ ಕಿಂ ಪ್ರಮಾದ್ಯತಿ] ಮನುಷ್ಯನು ಕೆಳಕೆಳಗೇನೇ ಉರುಳುತ್ತ ಪ್ರಮಾದಿಯೇಕಾಗುತ್ತಿದ್ದಾನೆ? [ನಿಷ್ಪ್ರಮಾದಃ] ಪ್ರಮಾದರಹಿತನಾಗುತ್ತ, [ಊರ್ಧ್ವಂ ಊರ್ಧ್ವಂ ಕಿಂ ನ ಅಧಿರೋಹತಿ] ಮೇಲೆ ಮೇಲೆಯೇ ಏಕೆ ಏರುವುದಿಲ್ಲ ?

ಭಾವಾರ್ಥ :- ಅಜ್ಞಾನಾವಸ್ಥೆಯಲ್ಲಿ ಯಾವ ಅಪ್ರತಿಕ್ರಮಣಾದಿಗಳಾಗುತ್ತವೆ ಅವುಗಳ ಮಾತಾದರೂ ಏಕೆ ? ಆದರೆ ಇಲ್ಲಿಯಂತೂ ಶುಭಪ್ರವೃತ್ತಿರೂಪವಾದ ದ್ರವ್ಯಪ್ರತಿಕ್ರಮಣಾದಿಗಳ ಪಕ್ಷವನ್ನು ಬಿಡಿಸುವುದಕ್ಕಾಗಿ ಅವಕ್ಕೆ (ದ್ರವ್ಯಪ್ರತಿಕ್ರಮಣಾದಿಗಳಿಗೆ) ನಿಶ್ಚಯನಯದ ಪ್ರಾಮುಖ್ಯತೆಯಿಂದ ವಿಷಕುಂಭವೆಂದು ಹೇಳಿದೆ. ಏಕೆಂದರೆ ಅವು ಕರ್ಮಬಂಧಕ್ಕೆ ಕಾರಣವಾಗಿವೆ, ಮತ್ತು ಪ್ರತಿಕ್ರಮಣ-ಅಪ್ರತಿಕ್ರಮಣಾದಿಗಳಿಂದ ರಹಿತವಾದಂಥ ಮೂರನೆಯ ಭೂಮಿಕೆಯು, ಅದು ಶುದ್ಧಆತ್ಮಸ್ವರೂಪವಾಗಿದೆ ಹಾಗೂ ಪ್ರತಿಕ್ರಮಣಾದಿಗಳಿಂದ ರಹಿತವಾಗಿರುವುದರಿಂದ ಅಪ್ರತಿಕ್ರಮಣಾದಿರೂಪವಾಗಿದೆ, ಅದಕ್ಕೆ ಅಮೃತಕುಂಭವೆಂದು ಹೇಳಿದೆ ಎಂದರೆ ಅಲ್ಲಿಯ ಅಪ್ರತಿಕ್ರಮಣಾದಿಗಳಿಗೆ ಅಮೃತಕುಂಭವೆಂದು ಹೇಳಿದೆ. ಮೂರನೆಯ ಭೂಮಿಕೆಯನ್ನು ಹತ್ತುವುದಕ್ಕಾಗಿ ಆಚಾರ್ಯದೇವರು ಈ

(ಪೃಥ್ವಿ)

ಪ್ರಮಾದಕಲಿತಃ ಕಥಂ ಭವತಿ ಶುದ್ಧಭಾವೋಽಲಸಃ
ಕಷಾಯಭರಗೌರವಾದಲಸತಾ ಪ್ರಮಾದೋ ಯತಃ ।
ಅತಃ ಸ್ವರಸನಿರ್ಭರೇ ನಿಯಮಿತಃ ಸ್ವಭಾವೇ ಭವನ್
ಮುನಿಃ ಪರಮಶುದ್ಧತಾಂ ವ್ರಜತಿ ಮುಚ್ಯತೇ ವಾಽಚಿರಾತ್ ॥೧೯೦॥

(ಶಾರ್ದೂಲವಿಕ್ರೀಡಿತಂ)

ತ್ಯಕ್ತ್ವಾಽಶುದ್ಧಿವಿಧಾಯಿ ತತ್ಕಿಲ ಪರದ್ರವ್ಯಂ ಸಮಗ್ರಂ ಸ್ವಯಂ
ಸ್ವದ್ರವ್ಯೇ ರತಿಮೇತಿ ಯಃ ಸ ನಿಯತಂ ಸರ್ವಾಪರಾಧಚ್ಯುತಃ ।
ಬಂಧಧ್ವಂಸಮುಪೇತ್ಯ ನಿತ್ಯಮುದಿತಃ ಸ್ವಜ್ಯೋತಿರಚ್ಛೋಚ್ಛಲ-
ಚ್ಚೈತನ್ಯಾಮೃತಪೂರಪೂರ್ಣಮಹಿಮಾ ಶುದ್ಧೋ ಭವನ್ಮುಚ್ಯತೇ ॥೧೯೧॥

ಉಪದೇಶವಿತ್ತಿದ್ದಾರೆ. ಪ್ರತಿಕ್ರಮಣಾದಿಗಳಿಗೆ ವಿಷಕುಂಭವೆಂದು ಹೇಳಿರುವ ಮಾತನ್ನು ಕೇಳಿ ಯಾವ ಜನರು ಪ್ರತಿಯಾಗಿ ಪ್ರಮಾದಿಯಾಗುತ್ತಾರೆ ಅವರ ಸಂಬಂಧದಲ್ಲಿ ಆಚಾರ್ಯದೇವರು ಹೀಗೆ ಹೇಳುತ್ತಾರೆ – ' ಈ ಜನರು ಕೆಳಕೆಳಗೇನೇ ಏಕೆ ಉರುಳುತ್ತಿದ್ದಾರೆ ? ಮೂರನೆಯ ಭೂಮಿಕೆಯಲ್ಲಿ ಮೇಲೆ ಮೇಲೆಯೇ ಏಕೆ ಏರುವುದಿಲ್ಲ ?' ಎಲ್ಲಿ ಪ್ರತಿಕ್ರಮಣಕ್ಕೆ ವಿಷಕುಂಭವೆಂದು ಹೇಳಿದೆ, ಅಲ್ಲಿ ಅದರ ನಿಷೇಧರೂಪವಾದ ಅಪ್ರತಿಕ್ರಮಣವೇ ಅಮೃತಕುಂಭವಾಗುತ್ತದೆ, ಅಜ್ಞಾನಿಯದಲ್ಲ. ಆದ್ದರಿಂದ ಯಾವ ಅಪ್ರತಿಕ್ರಮಣಾದಿ ಅಮೃತ ಕುಂಭಗಳನ್ನು ಹೇಳಿದ್ದಾರೆ ಅವನ್ನು ಅಜ್ಞಾನಿಯ ಅಪ್ರತಿಕ್ರಮಣಾದಿಗಳೆಂದು ತಿಳಿದುಕೊಳ್ಳದೆ ಮೂರನೆಯ ಭೂಮಿಕೆಯಲ್ಲಿರುವ ಶುದ್ಧ ಆತ್ಮಮಯವೆಂದು ತಿಳಿದುಕೊಳ್ಳಬೇಕು. ॥೧೮೯॥

ಈಗ ಇದೇ ಅರ್ಥವನ್ನು ದೃಢಪಡಿಸುತ್ತ ಕಲಶರೂಪದ ಕಾವ್ಯ ಹೇಳುತ್ತಾರೆ,–

ಶ್ಲೋಕಾರ್ಥ :- [ಕಷಾಯ-ಭರ-ಗೌರವಾತ್ ಅಲಸತಾ ಪ್ರಮಾದಃ] ಕಷಾಯಗಳ ಭಾರದಿಂದ ಜಡವಾಗಿ ಅಲಸಿಯಾಗುವುದು ಅದು ಪ್ರಮಾದವಿದೆ; [ಯತಃ ಪ್ರಮಾದಕಲಿತಃ ಅಲಸಃ ಶುದ್ಧಭಾವಃ ಕಥಂ ಭವತಿ] ಆದ್ದರಿಂದ ಈ ಪ್ರಮಾದಯುಕ್ತವಾದ ಆಲಸ್ಯಭಾವವು ಶುದ್ಧಭಾವ ಹೇಗಾಗುವ ಸಾಧ್ಯತೆಯಿದೆ? - [ಅತಃ ಸ್ವರಸನಿರ್ಭರೇ ಸ್ವಭಾವೇ ನಿಯಮಿತಃ ಭವನ್ ಮುನಿಃ] ಅದಕ್ಕಾಗಿ ನಿಜರಸದಿಂದ ಪರಿಪೂರ್ಣನೂ, ಸ್ವಭಾವದಲ್ಲಿ ನಿಶ್ಚಲನೂ ಇರುವಂಥ ಮುನಿಯೇ [ಪರಮಶುದ್ಧತಾಂ ವ್ರಜತಿ] ಶ್ರೇಷ್ಠವಾದ ಶುದ್ಧತೆಗೆ ಪ್ರಾಪ್ತನಾಗುತ್ತಾನೆ [ವಾ] ಇಲ್ಲವೆ [ಅಚಿರಾತ್ ಮುಚ್ಯತೇ] ಬೇಗನೆ ಅಲ್ಪಕಾಲದಲ್ಲಿಯೇ-(ಕರ್ಮಬಂಧನದಿಂದ) ಬಿಡುಗಡೆ ಹೊಂದುತ್ತಾನೆ.

ಭಾವಾರ್ಥ :- ಕಷಾಯಗಳನ್ನು ಗೌರವಿಸುವ ಭರದಿಂದ ಪ್ರಮಾದವಾಗುತ್ತದೆ, ಅದಕ್ಕಾಗಿ ಪ್ರಮಾದಿಗೆ ಶುದ್ಧಭಾವವಿರುವುದಿಲ್ಲ, ಯಾವ ಮುನಿಯು ಪ್ರಯತ್ನಪೂರ್ವಕವಾಗಿ ಸ್ವಭಾವದಲ್ಲಿ ಪ್ರವೃತ್ತನಾಗುತ್ತಾನೆ ಅವನು ಶುದ್ಧನಾಗಿ ಮೋಕ್ಷವನ್ನು ಪಡೆಯುತ್ತಾನೆ. ॥೧೯೦॥

ಈಗ ಮುಕ್ತನಾಗುವ ಅನುಕ್ರಮವನ್ನು ದರ್ಶಿಸುವ ಕಲಶರೂಪದ ಕಾವ್ಯವನ್ನು ಹೇಳುತ್ತಾರೆ,–

(ಮಂದಾಕ್ರಾಂತಂ)

ಬಂಧಚ್ಛೇದಾತ್ಕಲಯದತುಲಂ ಮೋಕ್ಷಮಕ್ಷಯ್ಯಮೇತ-
ನ್ನಿತ್ಯೋದ್ಯೋತಸ್ಫುಟಿತಸಹಜಾವಸ್ಥಮೇಕಾಂತಶುದ್ಧಮ್ ।
ಏಕಾಕಾರಸ್ವರಸಭರತೋಽತ್ಯಂತಗಂಭೀರಧೀರಂ
ಪೂರ್ಣಂ ಜ್ಞಾನಂ ಜ್ವಲಿತಮಚಲೇ ಸ್ವಸ್ಯ ಲೀನಂ ಮಹಿಮ್ನಿ ॥೧೯೨॥

ಇತಿ ಮೋಕ್ಷೋ ನಿಷ್ಕ್ರಾಂತಃ ।

ಶ್ಲೋಕಾರ್ಥ :- [ಯಃ ಕಿಲ ಅಶುದ್ಧಿವಿಧಾಯಿ ಪರದ್ರವ್ಯಂ ತತ್ ಸಮಗ್ರಂ ತ್ಯಕ್ತ್ವಾ] ಯಾವ ಪುರುಷನು ನಿಜವಾಗಿ ಅಶುದ್ಧತೆಯನ್ನುಂಟುಮಾಡುವಂಥ ಸಮಸ್ತ ಪರದ್ರವ್ಯಗಳನ್ನು ಬಿಟ್ಟುಕೊಟ್ಟು [ಸ್ವಯಂ ಸ್ವದ್ರವ್ಯೇ ರತಿಂ ಏತಿ] ತಾನು ಸ್ವದ್ರವ್ಯದಲ್ಲಿ ಮಗ್ನನಾಗುತ್ತಾನೆ, [ಸಃ] ಆ ಪುರುಷನು [ನಿಯತಂ] ನಿಯಮದಿಂದ [ಸರ್ವ-ಅಪರಾಧ-ಚ್ಯುತಃ] ಎಲ್ಲ ಅಪರಾಧಗಳಿಂದ ರಹಿತನಾಗುತ್ತ, [ಬಂಧ-ಧ್ವಂಸಂ ಉಪೇತ್ಯ ನಿತ್ಯಂ ಉದಿತಃ] ಬಂಧದ ನಾಶಕ್ಕೆ ಪ್ರಾಪ್ತನಾಗಿ ನಿತ್ಯೋದಿತ (ಯಾವಾಗಲೂ ಪ್ರಕಾಶಮಾನ)ನಾಗುತ್ತ, [ಸ್ವ-ಜ್ಯೋತಿಃ-ಅಚ್ಛ-ಉಚ್ಛಲತ್-ಚೈತನ್ಯ-ಅಮೃತ-ಪೂರ-ಪೂರ್ಣ-ಮಹಿಮಾ] ತನ್ನ ಜ್ಯೋತಿಯಿಂದ (ಆತ್ಮ ಸ್ವರೂಪದ ಪ್ರಕಾಶದಿಂದ) ನಿರ್ಮಲವಾಗಿ ಉಕ್ಕುತ್ತಿರುವ ಯಾವ ಚೈತನ್ಯಸ್ವರೂಪದ ಅಮೃತ ಪ್ರವಾಹದಿಂದ ಯಾವುದರ ಮಹಿಮೆಯು ಪೂರ್ಣವಿದೆ ಹಾಗೆ [ಶುದ್ಧಃ ಭವನ್] ಶುದ್ಧನಾಗುತ್ತ, [ಮುಚ್ಯತೇ] ಕರ್ಮಗಳಿಂದ ಮುಕ್ತನಾಗುತ್ತಾನೆ.

ಭಾವಾರ್ಥ :- ಯಾವ ಪುರುಷನು ಮೊದಲು ಎಲ್ಲ ಪರದ್ರವ್ಯಗಳನ್ನು ತ್ಯಾಗಮಾಡಿ ತನ್ನ ದ್ರವ್ಯದಲ್ಲಿ (ಆತ್ಮಸ್ವರೂಪದಲ್ಲಿ) ಮಗ್ನನಾಗುತ್ತಾನೆ, ಆ ಪುರುಷನು ಎಲ್ಲ ರಾಗ ಮೊದಲಾದ ಅಪರಾಧಗಳಿಂದ ರಹಿತನಾಗಿ ಭಾವೀಬಂಧದ ನಾಶಮಾಡುತ್ತಾನೆ ಮತ್ತು ನಿತ್ಯವೂ ಉದಯರೂಪವಾದ ಕೇವಲಜ್ಞಾನವನ್ನು ಪಡೆದು ಶುದ್ಧನಾಗಿ, ಸಕಲಕರ್ಮಗಳನ್ನು ನಷ್ಟಪಡಿಸಿ, ಮೋಕ್ಷಕ್ಕೆ ಪ್ರಾಪ್ತನಾಗುತ್ತಾನೆ. ಇದು ಮುಕ್ತವಾಗುವ ಕ್ರಮವಿದೆ. ॥೧೯೧॥

ಈಗ ಮೋಕ್ಷ ಅಧಿಕಾರವನ್ನು ಪೂರ್ಣಗೊಳಿಸುತ್ತ ಅದರ ಕೊನೆಯ ಮಂಗಲರೂಪವಾಗಿ ಪೂರ್ಣಜ್ಞಾನದ ಮಹಿಮೆಯನ್ನು (ಸರ್ವಥಾ ಶುದ್ಧವಾದ ಆತ್ಮದ್ರವ್ಯದ ಮಹಿಮೆಯನ್ನು) ಕಲಶರೂಪದ ಕಾವ್ಯದಿಂದ ಹೇಳುತ್ತಾರೆ,—

ಶ್ಲೋಕಾರ್ಥ :- [ಬಂಧಚ್ಛೇದಾತ್ ಅತುಲಂ ಅಕ್ಷಯ್ಯಂ ಮೋಕ್ಷಂ ಕಲಯತ್] ಕರ್ಮದ ಬಂಧನವನ್ನು ಛೇದಿಸುವುದರಿಂದ ಅತುಲವೂ, ಅಕ್ಷಯವೂ (ಅವಿನಾಶಿಯೂ) ಆದ ಮೋಕ್ಷದ ಅನುಭವವನ್ನು ಪಡೆಯುತ್ತಿರುವ, [ನಿತ್ಯ-ಉದ್ಯೋತ-ಸ್ಫುಟಿತ-ಸಹಜ-ಅವಸ್ಥಂ] ನಿತ್ಯ ಉದ್ಯೋತರೂಪವಾದಂಥ (ಯಾರ ಪ್ರಕಾಶವು ನಿತ್ಯವಿದೆ ಅಂಥ) ಯಾರ ಸ್ವಾಭಾವಿಕವಾದ ಅವಸ್ಥೆಯು ಅರಳಿ ನಿಂತಿದೆ ಅಂಥ, [ಏಕಾಂತ-ಶುದ್ಧಂ] ಏಕಾಂತಶುದ್ಧವಾದ (ಕರ್ಮಮಲವು ಉಳಿಯದಿರುವುದರಿಂದ ಅತ್ಯಂತ ಶುದ್ಧವಾದ), [ಏಕಾಕಾರ-ಸ್ವ-ರಸ-ಭರತಃ ಅತ್ಯಂತ-ಗಂಭೀರ-ಧೀರಂ] ಮತ್ತು ಏಕಾಕಾರವಾಗಿ (ಕೇವಲ ಒಂದು ಜ್ಞಾನಾಕಾರದಲ್ಲಿ ಪರಿಣಮಿಸುವ) ನಿಜರಸದ ಅತಿಶಯತೆಯಿಂದ ಯಾವುದು ಅತ್ಯಂತ ಗಂಭೀರವೂ ಮತ್ತು ಧೀರವೂ ಆಗಿದೆ ಅಂಥ [ಏತತ್ ಪೂರ್ಣಂ ಜ್ಞಾನಂ] ಈ

ಇತಿ ಶ್ರೀಮದಮೃತಚಂದ್ರಸೂರಿವಿರಚಿತಾಯಾಂ ಸಮಯಸಾರವ್ಯಾಖ್ಯಾಯಾಮಾತ್ಮಖ್ಯಾತೌ ಮೋಕ್ಷಪ್ರರೂಪಕಃ ಅಷ್ಟಮೋऽಂಕಃ ॥

ಪರಿಪೂರ್ಣಜ್ಞಾನವು [ಜ್ವಲಿತಂ] ಪ್ರಕಾಶಮಾನವಾಗಿದೆ (ಎಂದರೆ ಸರ್ವಥಾ ಶುದ್ಧ ಆತ್ಮದ್ರವ್ಯವು ಜಾಜ್ವಲ್ಯಮಾನವಾಗಿ ಪ್ರಕಟವಾಗಿದೆ;) ಮತ್ತು [ಸ್ವಸ್ಯ ಅಚಲೇ ಮಹಿಮ್ನಿ ಲೀನಂ] ತನ್ನ ಅಚಲವಾದ ಮಹಿಮೆಯಲ್ಲಿ ಮಗ್ನವಾಗಿದೆ.

ಭಾವಾರ್ಥ :- ಕರ್ಮದ ನಾಶಮಾಡಿ ಮೋಕ್ಷದ ಅನುಭವ ಪಡೆಯುತ್ತ, ತನ್ನ ಸ್ವಾಭಾವಿಕವಾದ ಅವಸ್ಥೆಯರೂಪವೂ, ಅತ್ಯಂತ ಶುದ್ಧವೂ, ಸಮಸ್ತ ಜ್ಞೇಯಾಕಾರಗಳನ್ನು ಗೌಣಮಾಡುವಂತಹುದೂ, ಅತ್ಯಂತ ಗಂಭೀರವೂ (ಯಾವುದರ ಅಂತ್ಯವಿಲ್ಲ ಅಂಥ) ಮತ್ತು ಧೀರವೂ (ಆಕುಲತೆಯಿಲ್ಲದ್ದು) - ಆದ ಪೂರ್ಣಜ್ಞಾನವು ಸ್ಪಷ್ಟದೈದೀಪ್ಯಮಾನವಾಗುತ್ತ, ತನ್ನ ಮಹಿಮೆಯಲ್ಲಿ ಮಗ್ನವಾಗಿಬಿಟ್ಟಿತು. ॥೧೯೨॥

ಟೀಕೆ :- ಈ ಪ್ರಕಾರವಾಗಿ ಮೋಕ್ಷವು (ರಂಗಮಂಟಪದಿಂದ) ಹೊರಗೆ ಹೊರಟುಹೋಯಿತು.

ಭಾವಾರ್ಥ :- ರಂಗಮಂಟಪದಲ್ಲಿ ಮೋಕ್ಷತತ್ತ್ವದ ಸೋಗು ಬಂದಿತ್ತು, ಎಲ್ಲಿ ಜ್ಞಾನವು ಪ್ರಕಟವಾಗುತ್ತದೆ ಅಲ್ಲಿ ಆ ಮೋಕ್ಷದ ಸೋಗು ರಂಗಮಂಟಪದಿಂದ ಹೊರಗೆ ಹೊರಟುಹೋಗುತ್ತದೆ.

ಯಾವನು ದೃಢಬಂಧನದಿಸಿಲುಕಿಮತ್ತಾಬಂಧಸ್ವರೂಪವ ದುಃಖವೆಂದರಿದು
ನಿತ್ಯಚಿಂತಿಪನಿದು ಹೇಗೆಕೆಡುವುದೆಂದಾದರದುಕೆಡದೆಹಾಗೆ ಉಳಿಯುವುದು
ನಿಶ್ಶಂಕನಾಗಿ ಆಯುಧವನಡೆಸುವನು ಛೇದಿಸುವ ತೀಕ್ಷ್ಣಾಯುಧವಪಿಡಿದು
ಹೀಗೆ ಜ್ಞಾನಿ ಕರ್ಮಾತ್ಮಗಳಭಿನ್ನಮಾಡಿ ತನ್ನತಾಗ್ರಹಿಪನು ಬುದ್ಧಿರೂಪಾಯುಧದಿ

ಈ ಪ್ರಕಾರವಾಗಿ ಶ್ರೀ ಸಮಯಸಾರದ ಶ್ರೀಮದ್‌ಭಗವತ್ಕುಂದಕುಂದಾಚಾರ್ಯದೇವ ಪ್ರಣೀತ
ಶ್ರೀ ಸಮಯಸಾರ ಪರಮಾಗಮದ ಶ್ರೀಮದ್ ಅಮೃತಚಂದ್ರಾಚಾರ್ಯದೇವ ವಿರಚಿತ
'ಆತ್ಮಖ್ಯಾತಿ'ಯೆಂಬ ಹೆಸರಿನ ಟೀಕೆಯಲ್ಲಿ ಮೋಕ್ಷದ ಪ್ರರೂಪಣೆಮಾಡುವ
ಎಂಟನೆಯ ಅಂಕವು ಸಮಾಪ್ತವಾಯಿತು.